೧೦. ಸಂಸ್ಕೃತಿ ಮತ್ತು ಗುಣಾತ್ಮಕ ಶಿಕ್ಷಣ

ಸ್ಥಳೀಯ ಸಂಸ್ಕೃತಿ ಮತ್ತು ಶಿಕ್ಷಣ

'ರಾಮ ಎಂಬೆರಡಕ್ಷರದಲ್ಲಿ' ಹುದುಗಿರುವ ಅರ್ಥವ್ಯಾಪ್ತಿ ಆ ಸಂಸ್ಕೃತಿಯ ಜನಮಾನಸದಲ್ಲಿ ಅನೇಕ ಪೀಳಿಗೆಗಳ ಪರ್ಯಂತ ಸಂಶ್ಲೇಷಣೆಗೊಂಡು, ನಿರಂತರವಾಗಿ ವಿಸ್ತಾರವಾಗುತ್ತಲೇ ಇರುವಂಥದು. ಹಾಗೆಯೇ 'ಮರ' ಎಂಬೆರಡಕ್ಷರವಷ್ಟೇ ಮರವಾಗುವುದಿಲ್ಲ. ಒಂದು ಅನುಭವಕ್ಕೆ ಕೊಟ್ಟ ಹೆಸರು ಇದು. ಅನುಭವದಿಂದ ಪದ ಹುಟ್ಟಿದೆಯೇ ಹೊರತು ಪದದಿಂದ ಅನುಭವ ಹುಟ್ಟಿಲ್ಲ; ಎಂದೂ ಹುಟ್ಟಲಾರದು. ಗಿರಿಜನರಿಗೆ 'ಮರ' ಧ್ವನಿಸುವ ಅರ್ಥಕ್ಕೂ ಪಟ್ಟಣವಾಸಿಗಳಿಗೆ ಅದು ಧ್ವನಿಸುವ ಅರ್ಥಕ್ಕೂ ಅಥವಾ ಮರಳುಗಾಡಿನ ಅರಬನಿಗೆ ಅದು ಧ್ವನಿಸುವ ಅರ್ಥಕ್ಕೂ ಎಷ್ಟು ವ್ಯತ್ಯಾಸವಿರುತ್ತದೆ! ಹಾಗೆ ನೋಡಿದರೆ ಅರಬರ ಪರಿಭಾಷೆಯಲ್ಲಿ ಒಂಟೆಗೆ ಸಂಬಂಧಿಸಿದ ಸುಮಾರು ಆರು ಸಾವಿರ ಪದಗಳು ಬಳಕೆಯಲ್ಲಿವೆಯಂತೆ. ಮರಗಳ ಒಡನಾಟದಲ್ಲಿ ಬದುಕುವ ಗಿರಿಜನರಲ್ಲಿ ಮರಗಳಿಗೆ ಸಂಬಂಧಪಟ್ಟ ಸಾವಿರಾರು ಪದಗಳು ಬಳಕೆಯಲ್ಲಿವೆ. ಹೀಗೆ ಪದಗಳ ಸಂಖ್ಯೆ ಮತ್ತು ಅರ್ಥವ್ಯಾಪ್ತಿ ಆಯಾ ಪ್ರದೇಶಗಳ ಪರಿಸರವನ್ನು ಮತ್ತು ಸಂಸ್ಕೃತಿಯನ್ನು ಅವಲಂಬಿಸಿರುತ್ತದೆ.

ಪದದಿಂದ ಅನುಭವ ಹುಟ್ಟಲಾರದು ಎಂದು ಈ ಹಿಂದೆ ಹೇಳಿದ ಮಾತನ್ನು ನಾವು ಗಂಭೀರವಾಗಿ ಪರಿಗಣಿಸಿದರೆ ಶಿಕ್ಷಣ ನಮ್ಮ ದೇಸೀ ಸಂಸ್ಕೃತಿಯನ್ನು, ಎಂದರೆ ಸ್ಥಳೀಯ ಕಲೆ, ಸಾಹಿತ್ಯ, ಚರಿತ್ರೆ ಹಾಗೂ ಅನೇಕ ಬಗೆಯ ಜೀವನವಿಧಾನಗಳನ್ನು ಒಳಗೊಳ್ಳುವುದು ಮುಖ್ಯ. ಏಕೆಂದರೆ ಮಗುವಿಗೆ ಗಾಢ ಅನುಭವವನ್ನು ಕೊಟ್ಟಿರುವ ಈ ಅಂಶಗಳ ಸುತ್ತ ನಾವು ಶಿಕ್ಷಣವನ್ನು ಕಟ್ಟಬಹುದು. ಗೊತ್ತಿರುವ ವಿಷಯದಿಂದ ಗೊತ್ತಿರದ ವಿಷಯದ ಕಡೆಗೆ ಅನ್ಯೋನ್ಯ ಸಂಬಂಧವಿರುವಂತೆ ಜ್ಞಾನವನ್ನು ಹೆಣೆಯುತ್ತ ಚಲಿಸುವುದು ನಿಜವಾದ ಶಿಕ್ಷಣ ಎನಿಸುತ್ತದೆ. ಇಂತಹ ಸಂದರ್ಭದಲ್ಲಿ ಮಗುವಿನ ಮನಸ್ಸಿನಲ್ಲಿ ನಿರ್ಮಾಣವಾಗುವ ಜ್ಞಾನ ಒಂದಕ್ಕೊಂದು ಸಂಬಂಧವಿರುವ, ಸಮಗ್ರ ಅರ್ಥವನ್ನು ಧ್ವನಿಸುವ ಅರಿವಾಗಿ ಮಗುವಿನ ವ್ಯಕ್ತಿತ್ವದ ಭಾಗವಾಗಿ ಮೈಗೂಡುತ್ತದೆ. ನಮ್ಮ ಇಂದಿನ ಶಿಕ್ಷಣ ಸ್ಥಳೀಯ ಸಂಸ್ಕೃತಿಯನ್ನು ಗಣನೆಗೆ ತೆಗೆದುಕೊಳ್ಳಬಹುದಾದ ವಿಷಯ ಎಂದು ಪರಿಗಣಿಸಿಯೇ ಇಲ್ಲ. ಅಸಂಖ್ಯಾತ ಪ್ರಾದೇಶಿಕ ಭಿನ್ನತೆಯ

ಕಾರಣದಿಂದಾಗಿ ಶಾಲೆಗಳಲ್ಲಿ ಏಕರೂಪದ ಸಾಂಸ್ಕೃತಿಕ ಶಿಕ್ಷಣವಿದ್ದು ಇದು ಅಸಂಬದ್ಧವೆನಿಸುತ್ತದೆ. ಸ್ಥಳೀಯ ಜನಪದ ಸಾಹಿತ್ಯ, ಜನಪದ ಕಲೆ, ಸಾಂಪ್ರದಾಯಿಕ ಜ್ಞಾನವನ್ನು ಆಯಾ ಪ್ರದೇಶದ ಶಾಲೆಗಳು ತಮ್ಮ ಪಠ್ಯದಲ್ಲಿ ತಾವೆ ಅಳವಡಿಸಿಕೊಳ್ಳಬೇಕು. ಆದರೆ ನಮ್ಮ ಇಂದಿನ ಶಿಕ್ಷಣ ವ್ಯವಸ್ಥೆ ಇವುಗಳನ್ನು ಪಠ್ಯಕ್ರಮದ ಹೊರಗಿನ ವಿಷಯ, ಆದ್ದರಿಂದ ಇವು ಅಮುಖ್ಯ ಎಂದು ಭಾವಿಸಿದಂತಿದೆ. ಮಲೈಮಹದೇಶ್ವರ ಬೆಟ್ಟದ ಸುತ್ತಮುತ್ತಲಿನ ಪ್ರದೇಶ ಜನಪದ ಸಾಹಿತ್ಯದ ಕಣಜ. ಇಂದಿಗೂ ಈ ಪ್ರದೇಶದಲ್ಲಿ ಜೀವಂತವಾಗಿರುವ ಜನಪದ ಕಲೆಗಳು, ಗಿಡಮೂಲಿಕೆಗಳ ಜ್ಞಾನ ಅಥವಾ ಗಿರಿಜನರ ನಡುವೆ ಇರುವ ಅಮೂಲ್ಯವಾದ ಪ್ರಕೃತಿಜ್ಞಾನವನ್ನು ನಾವು ಗಣನೆಗೆ ತೆಗೆದುಕೊಂಡಿಲ್ಲ. ಜೊತೆಗೆ ಸ್ಥಳೀಯ ಸಾಧಕರನ್ನು ಬಹುದೂರದ ಯಾರೋ ಗುರುತಿಸುತ್ತಿರುವಾಗ ನಮ್ಮ ಶಾಲಾ ಮಕ್ಕಳಿಗೆ ಈ ಬಗ್ಗೆ ತಿಳುವಳಿಕೆಯೇ ಇರುವುದಿಲ್ಲ. ನಮ್ಮಂತೆಯೇ ನಮ್ಮೊಡನೆಯೇ ಇರುವ ಒಬ್ಬ ವ್ಯಕ್ತಿ ಅದ್ವಿತೀಯವಾದದ್ದನ್ನು ಸಾಧಿಸಿರುವ ವಿಷಯ ಮಕ್ಕಳಿಗೆ ತಿಳಿದರೆ ಮಕ್ಕಳು ಸಹ ಈ ಸಾಧ್ಯತೆಗಳನ್ನು ತಮ್ಮೊಳಗೆ ಗುರುತಿಸಿಕೊಳ್ಳುತ್ತಾರೆ. ನಮ್ಮ ನಡುವೆ ಇರುವ ಅಮೂಲ್ಯವಾದದ್ದನ್ನು ಗುರುತಿಸಲು ಒಂದು ಮಾನದಂಡವನ್ನು ನಮ್ಮ ಮಕ್ಕಳಿಗೆ ಶಾಲೆಯ ಸಂಸ್ಕೃತಿ ರೂಪಿಸಿಕೊಡಬೇಕು. ಇಂತಹ ಒಂದು ವಿವೇಕ ಮೊದಲು ನಮ್ಮ ಅಧ್ಯಾಪಕರಿಗೆ ಇರಬೇಕು. ಚಾಮರಾಜನಗರದ ಹಳ್ಳಿಯೊಂದರಲ್ಲಿ ಅಂತಾರಾಷ್ಟ್ರೀಯ ಖ್ಯಾತಿಯ ಗೊರವರ ಕುಣಿತದ ಕಲಾಕಾರ ಪುಟ್ಟಮಲ್ಲೇಗೌಡರು ಇದ್ದಾರೆ. ಆದರೆ ಇವರ ಬಗ್ಗೆ ಈ ಪ್ರದೇಶದ ಶಾಲೆಯ ಮಕ್ಕಳಿಗೆ ಎಷ್ಟು ಗೊತ್ತು? ಅಥವಾ ಬಾಳೆ ಬೆಳೆಯುವ ಒಬ್ಬ ಅಸಾಧಾರಣ ಕೃಷಿಕ ಇದ್ದಾನೆ. ಅವನಿಗೆ ಪ್ರಶಸ್ತಿಗಳು ಬಂದಿವೆ. ಆದರೆ ಈ ಬಗ್ಗೆ ಶಾಲೆಯ ಅಧ್ಯಾಪಕರುಗಳಿಗಾಗಲೀ ಅಥವಾ ಶಿಕ್ಷಣದ ಇಲಾಖೆಯವರಿಗಾಗಲೀ ಮಾಹಿತಿಯೇ ಇರುವುದಿಲ್ಲ. ನಮ್ಮ ನಡುವೆ ಇರುವವರೂ ಸಹ ಸಾಧಿಸಬಲ್ಲರು ಎಂಬ ನಂಬಿಕೆ ಈ ಜೀವಂತ ಪ್ರಕರಣಗಳ ಮೂಲಕ ಮಕ್ಕಳ ಮನಸ್ಸನ್ನು ಮುಟ್ಟುತ್ತದೆ. ಆದರೆ ನಮ್ಮ ಶಾಲಾವ್ಯವಸ್ಥೆ ಈ ಸಂಬಂಧವಾಗಿ ಪ್ರಯತ್ನಗಳನ್ನೇ ಮಾಡುವುದಿಲ್ಲ. ಇದಕ್ಕೆ ಬೇಕಾದ ಸೂಕ್ಷ್ಮತೆಯನ್ನೇ ನಮ್ಮ ವ್ಯವಸ್ಥೆ ಪಡೆದಿಲ್ಲ. 'ಕರಡಿಕುಣಿತ' ಪದ್ಯದ ಬಗ್ಗೆ ಕವಿ ಬೇಂದ್ರೆಯವರನ್ನು ಪರಿಚಯಿಸುವ ನಮ್ಮ ಶಾಲಾ ಪಠ್ಯದಲ್ಲಿ ಬೇಂದ್ರೆಯವರು ಶಾಲಾ ಶಿಕ್ಷಕರಾಗಿದ್ದರು ಎಂಬ ಅಂಶವನ್ನೇ ಹೇಳಿರಲಿಲ್ಲ. ಈಗ ಹೊಸ ಮುದ್ರಣದಲ್ಲಿ ಹೇಳಿದ್ದಾರೋ ಏನೊ? ಒಬ್ಬ ಶಾಲಾ ಶಿಕ್ಷಕ ಜ್ಞಾನಪೀಠ ಪ್ರಶಸ್ತಿಯನ್ನು ಪಡೆದಿದ್ದಾನೆ ಎನ್ನುವ ವಿಷಯ ಶಾಲಾ ಶಿಕ್ಷಕರೆಲ್ಲರಿಗೂ ಒಂದು ಹೆಮ್ಮೆಯ ಮಾತಲ್ಲವೆ? ಶಾಲಾ ಶಿಕ್ಷಕರು ತಮ್ಮ ಸಾಧ್ಯತೆಯನ್ನು ತಾವು ಗುರುತಿಸಿಕೊಳ್ಳಲು ಈ ಮಾಹಿತಿ ಸ್ವಲ್ಪವಾದರೂ ನೆರವಿಗೆ ಬರಬಹುದಲ್ಲವೇ? ಅದ್ವಿತೀಯವಾದದ್ದು ಸದಾ ಕಾಲವೂ ನಮ್ಮ ವೃತ್ತಿ ವ್ಯಾಪ್ತಿಗೆ ಹೊರಗಿನದು ಎಂಬ ಕೀಳರಿಮೆಯಾದರೂ ನಮ್ಮ ಶಾಲಾ ಮಾಸ್ತರುಗಳಲ್ಲಿ ಕಡಿಮೆಯಾಗಬಹುದು.

ನಮ್ಮ ದೇವಸ್ಥಾನ, ಕೋಟೆ-ಕೊತ್ತಳಗಳು

ಪಠ್ಯಕ್ರಮದಲ್ಲಿರುವ ಚರಿತ್ರೆಯ ಪಾಠಗಳ ಜೊತೆಜೊತೆಗೆ ತಮ್ಮದೇ ಸ್ಥಳೀಯ ಚರಿತ್ರೆಯನ್ನು ಮಕ್ಕಳು ಕಲಿಯುವುದು ಬಹಳ ಮುಖ್ಯ. ಇಂತಹ ಸ್ಥಳೀಯ ಚಾರಿತ್ರಿಕ ಸ್ಥಳಗಳಿಗೆ ಅಧ್ಯಾಪಕರು-ಮಕ್ಕಳು ಭೇಟಿ ನೀಡಿ ಪರಿಣತರ ಸಹಾಯದಿಂದ ತಮ್ಮೂರಿನ ದೇವಸ್ಥಾನದ ಸ್ಮಾರಕಗಳ ಬಗ್ಗೆ ಮಾಹಿತಿ ಸಂಗ್ರಹಿಸಿ ಚರ್ಚಿಸುವುದು ಮಕ್ಕಳಿಗೆ ಒಂದು ಹೊಸ ಅನುಭವವನ್ನು ನೀಡುತ್ತದೆ. ನಮ್ಮ ಪಠ್ಯಪುಸ್ತಕದ ಸಮಾಜ ಪಾಠಗಳು ಒಂದು ಸಮಗ್ರ ವಿಷಯದಿಂದ ಆಯ್ದುತೆಗೆದ ತುಂಡು ತುಣುಕುಗಳಂತೆ ಇರುತ್ತವೆ. ಇವುಗಳನ್ನು ಓದಿದರೆ ಚರಿತ್ರೆಯ ಹಿಂದಾಗಲೀ ಮುಂದಾಗಲೀ ಒಂದೂ ತಿಳಿಯುವುದಿಲ್ಲ. ಇಂತಹ ವಿಷಯಗಳಿಗೆ ಪೂರಕ ಸಾಮಗ್ರಿಗಳನ್ನು ಒದಗಿಸುವುದು ಮುಖ್ಯ. 'ಧ್ವನಿ ಸಂಸ್ಥೆ' ಎಂಬ ಸ್ವಯಂಸೇವಾ ಸಂಸ್ಥೆ ಈ ಬಗೆಯ ಪೂರಕ ಸಾಮಗ್ರಿಯನ್ನು ಒದಗಿಸಿ ಸಮಾಜದ ಪಾಠಗಳು ಮಗುವಿನ ಮನಸ್ಸಿನಲ್ಲಿ ಒಂದು ಸಂಪೂರ್ಣ ಅನುಭವವಾಗಿ ನೆಲೆ ನಿಲ್ಲುವಂತೆ ಸಹಕರಿಸುತ್ತಿದೆ. ಆದರೆ ಇಂತಹ ಪ್ರಯೋಗಗಳು ಎಲ್ಲೋ ಕೆಲವು ಬೆರಳೆಣಿಕೆಯ ಶಾಲೆಗಳಲ್ಲಿ ಮಾತ್ರ ಆಗುತ್ತಿದೆ.

ಸಾಂಸ್ಕೃತಿಕವಾಗಿ ಮುಖ್ಯವಾದ ಆದರೆ ಸ್ಥಳೀಯವಾಗಿ ಸರ್ವೇಸಾಮಾನ್ಯವಾಗಿರುವ ವಿಷಯಗಳನ್ನು ಮಕ್ಕಳಿಗೆ ತಿಳಿಸಿಕೊಡುವ ಪ್ರಯತ್ನ ನಮ್ಮ ಶಾಲೆಗಳಲ್ಲಿ ಆಗಬೇಕು. ಈ ಸ್ಮಾರಕ, ಕೋಟೆಕೊತ್ತಳಗಳು ಅಥವಾ ದೇವಸ್ಥಾನಗಳು ಅತಿ ಸಮೀಪದಲ್ಲೇ ಇರುವುದರಿಂದ ಇವು ಮಗುವಿನ ದಿನನಿತ್ಯದ ಸಾಮಾನ್ಯ ಅನುಭವವಾಗಿ ಉಳಿದುಬಿಡುತ್ತವೆ. ಹಾಗಾಗಿ ಮಕ್ಕಳು ತಮ್ಮದೇ ನೆಲದ ವಿಶಿಷ್ಟ ಸಂಗತಿಗಳನ್ನು ತೀರಾ ಸಾಮಾನ್ಯ ಎಂದು ಪರಿಗಣಿಸಿಬಿಡುತ್ತಾರೆ. ಮಕ್ಕಳಷ್ಟೇ ಏಕೆ, ದೊಡ್ಡವರೂ ಹಾಗೆಯೇ ತಿಳಿದಿರುತ್ತಾರೆ. ಸಾಂಸ್ಕೃತಿಕವಾಗಿ ವಿಶಿಷ್ಟವಾಗಿರುವ ಒಂದು ವಿಷಯ, ಹೆಮ್ಮೆ ಪಡಬಹುದಾದ ಒಂದು ಸಂಗತಿ ತನ್ನ ಪರಂಪರೆಯಲ್ಲಿದೆ ಎಂದು ಭಾವಿಸುವುದೇ ಮಗುವಿಗೆ ಒಂದು ಗಾಢ ಅನುಭವ. ಈ ಅನುಭವ ಮಗುವಿಗೆ ಶ್ರೇಷ್ಠ ವ್ಯಕ್ತಿಚಿತ್ರವನ್ನು ಕೊಡಬಹುದು. ಅಥವಾ ಕಾರಣಾಂತರಗಳಿಂದ ಮನದಾಳದಲ್ಲಿ ಬೇರೂರಿರುವ ಕೀಳರಿಮೆಯಿಂದ ಸ್ವಲ್ಪ ಮಟ್ಟಿಗೆ ಬಿಡಿಸಿಕೊಳ್ಳಲು ಸಹಾಯ ಮಾಡಬಹುದು. ತನ್ನದೇ ಪರಿಸರದ ಇತಿಹಾಸ, ಪರಂಪರೆ, ಪದ್ಧತಿಗಳನ್ನು ಅರಿಯುವುದು ಮಗುವಿನ ವ್ಯಕ್ತಿತ್ವ ವಿಕಾಸದ ದೃಷ್ಟಿಯಿಂದಲೂ ಬಹಳ ಮುಖ್ಯ. ಈ ಪ್ರಯತ್ನದಲ್ಲಿ ಮಗು ಹೇಗೆ ಪೂರ್ವಗ್ರಹದಿಂದ ಮುಕ್ತವಾದ ಮನಸ್ಸಿನ ಮೂಲಕ ಒಂದು ವಿಷಯವನ್ನು ಶಾಸ್ತ್ರೀಯ ಅಧ್ಯಯನದ ನೆಲೆಗಟ್ಟಿಗೆ ಒಳಪಡಿಸಿ ಅಧ್ಯಯನ ಮಾಡಬಹುದು ಎಂಬ ಪರಿಕಲ್ಪನೆಯನ್ನು ಪಡೆಯುತ್ತದೆ. ಹೀಗೆ 'ಸಾಮಾನ್ಯ' ಎಂದು ಕಂಡುಬರುವ ಎಲ್ಲದರ ಆಳದಲ್ಲೂ ಒಂದು 'ಅಸಾಮಾನ್ಯ' ಸಂಗತಿ ಇರಬಹುದು, ದೃಷ್ಟಿಕೋನ ಬದಲಿಸಿ ನೋಡಿದರೆ ಮಾತ್ರ ಇದನ್ನು ಕಾಣಲು ಸಾಧ್ಯ ಎಂಬ ಅರಿವನ್ನು ಮಗು ಈ ಅಧ್ಯಯನಗಳ ಮೂಲಕ ಪಡೆಯಲು ಸಾಧ್ಯವಾಗುತ್ತದೆ. ಜೊತೆಗೆ ತನ್ನ

ಸ್ಥಿತಿಗತಿಗಳನ್ನು ಚಾರಿತ್ರಿಕವಾಗಿ, ಸಾಂಸ್ಕೃತಿಕವಾಗಿ ಅರಿಯುವ ಮೂಲಕ 'ನಾನೇಕೆ ಇತರರಿಗಿಂತ ಹಿಂದೆ' ಅಥವಾ 'ನಾನೇಕೆ ಇತರರಿಗಿಂತ ಮುಂದೆ' ಎಂಬ ಕಾಡುವ ಪ್ರಶ್ನೆಗಳಿಗೆ ನಿಜವಾದ ಉತ್ತರಗಳನ್ನು ಕಂಡುಕೊಳ್ಳಲು ಸಾಧ್ಯವಾದೀತು. ಅಥವಾ ವರ್ತಮಾನದ ಅನ್ಯಾಯವನ್ನು ಚಾರಿತ್ರಿಕವಾಗಿ ಅರ್ಥ ಮಾಡಿಕೊಳ್ಳುತ್ತ ಭಾವನಾತ್ಮಕವಾಗಿ ಪ್ರತಿಕ್ರಿಯಿಸುವ ಬದಲು ಬೌದ್ಧಿಕವಾಗಿ ಸಮರ್ಪಕವಾದ ನಿಲುವನ್ನು ಕಂಡುಕೊಳ್ಳಲು ಸಾಧ್ಯವಾಗಬಹುದು.

ಸಂಸ್ಕೃತಿ ಮತ್ತು ಸ್ವಸ್ವರೂಪ

ಮೇಲಿನ ವಾದಸರಣಿಯನ್ನೇ ವಿಸ್ತರಿಸುತ್ತ ತನ್ನದೇ ನೆಲದ ಸಂಸ್ಕೃತಿ ಹೇಗೆ ವ್ಯಕ್ತಿತ್ವ ನಿರ್ಮಾಣದಲ್ಲಿ ಬಹು ದೊಡ್ಡ ಪಾತ್ರವನ್ನು ವಹಿಸುತ್ತದೆ ಎಂಬುವುದನ್ನು ವಿಶ್ಲೇಷಿಸೋಣ. ಅದರಲ್ಲೂ ಮುಖ್ಯವಾಗಿ ವ್ಯಕ್ತಿಯ ಸ್ವಸ್ವರೂಪದ ರೂಪರೇಖೆಗಳು ಹೇಗೆ ಸ್ಥಳೀಯ ಸಂಸ್ಕೃತಿಯಿಂದ ಪ್ರಭಾವಿತವಾಗುತ್ತವೆ ಎಂಬುದನ್ನು ಅರಿಯಲು ಪ್ರಯತ್ನಿಸೋಣ. ಬೆಳೆದುನಿಂತ ಪಟ್ಟಣಗಳನ್ನು ಗಣನೆಗೆ ತೆಗೆದುಕೊಂಡರೆ ಸಾಂಸ್ಕೃತಿಕ ಪಲ್ಲಟಗಳು ಇಡೀ ದೇಶದ ಮುಖ್ಯವಾಹಿನಿಯಾಗಿವೆ ಎಂಬ ಅಭಿಪ್ರಾಯ ಮೂಡುತ್ತದೆ. ಆದರೆ ನಮ್ಮ ಗ್ರಾಮೀಣಪ್ರದೇಶಗಳು ಇನ್ನೂ ಕೂಡ ತಮ್ಮ ಸಾಂಸ್ಕೃತಿಕ ಸೊಗಡನ್ನು ಉಳಿಸಿಕೊಂಡೇ ಇವೆ. ಹಾಗಾಗಿ ನಗರ ಪ್ರದೇಶಗಳನ್ನು ಪ್ರಧಾನವಾಗಿ ಗಣನೆಗೆ ತೆಗೆದುಕೊಳ್ಳುವ ನಮ್ಮ ಶಿಕ್ಷಣ ಗ್ರಾಮೀಣ ಪ್ರದೇಶಗಳಲ್ಲಿ ಸೋಲುತ್ತದೆ. ಈ ಕಾರಣದಿಂದ ಸಂಸ್ಕೃತಿ ಮತ್ತು ಶಿಕ್ಷಣ ಕುರಿತಾದ ಚರ್ಚೆ ಮುಖ್ಯವಾಗುತ್ತದೆ.

ಒಂದು ನಿರ್ದಿಷ್ಟ ಸಾಂಸ್ಕೃತಿಕ ಪರಿಸರ ವ್ಯಕ್ತಿಗೆ ತನ್ನದೇ ಆದ ಒಂದು ಸ್ವಸ್ವರೂಪವನ್ನು ಕೊಡುತ್ತದೆ. ಬದುಕಿನ ತಾತ್ತ್ವಿಕ ನೆಲೆಗಳು ಈ ಪರಿಸರದಿಂದ ಬಹಳವಾಗಿ ಪ್ರಭಾವಿತವಾಗುತ್ತವೆ. ಬದುಕಿನ ಭೌತಿಕ ಉದ್ದೇಶ, ಮಾನಸಿಕ ಮತ್ತು ಆಧ್ಯಾತ್ಮಿಕ ಉದ್ದೇಶಗಳಿಗೆ ಒಂದು ಆಕಾರವನ್ನು ನಿಗದಿಪಡಿಸುತ್ತದೆ. ಒಬ್ಬ ವ್ಯಕ್ತಿ ಏನು ಎಂಬುದನ್ನು ಅವನ ಸಂಸ್ಕೃತಿಯ ಹೊರತಾಗಿ ಕಲ್ಪಿಸಿಕೊಳ್ಳುವುದು ಅಸಾಧ್ಯವೇ ಸರಿ. ವ್ಯಕ್ತಿಯ ಕುರುಹು, ಅವನ ಅರಿವು ಈ ಸಂಸ್ಕೃತಿಯ ಆಧಾರದ ಮೇಲೆ ರೂಪುಗೊಳ್ಳುವುದು ಅನಿವಾರ್ಯ. ಜೊತೆಗೆ ಸಂಸ್ಕೃತಿ ಎಂಬುದು ಒಂದು ಜನಸಮುದಾಯ ಬಹಳ ಕಾಲದಿಂದಲೂ ಬದುಕಿನ ಅವಘಡಗಳ ನಡುವೆ ಬದುಕಿ ಬಾಳಲು ಸಹಾಯ ಮಾಡಿದ ರೀತಿನೀತಿಗಳ ಅನುಭವದ ಸಾರ ಕೂಡ. ಬದುಕಿನ ಅರ್ಥ ಕಂಡುಕೊಳ್ಳುವಾಗ ಜನರ ಜೀವನ ಕ್ರಮ ಅವರವರ ಭೌತಿಕ ಪರಿಸರದೊಡನೆ ನಿರ್ದಿಷ್ಟ ರೀತಿಯಲ್ಲಿ ಬೆಸೆದುಕೊಂಡು ಒಂದು ಸಾಮಾನ್ಯ ಕುರುಹನ್ನು, ಎಂದರೆ ಸ್ವಸ್ವರೂಪವನ್ನು ಅಥವಾ ಐಡೆಂಟಿಟಿಯನ್ನು ಪ್ರತಿಯೊಬ್ಬರಿಗೂ, ಪ್ರತಿಯೊಂದು ಸಮುದಾಯಕ್ಕೂ ನೀಡಿರುತ್ತದೆ. ಈ ಐಡೆಂಟಿಟಿಯ

ಮೂಲಭೂತ ಸ್ವರೂಪ ಒಂದೇ ಆಗಿರುತ್ತದೆ ಎಂದು ಭಾವಿಸಿದರೂ ಈ ಮೂಲಭೂತ ಸ್ವರೂಪದ ವಿಸ್ತರಣೆ–ವಿಕಾಸ ವ್ಯಕ್ತಿನಿಷ್ಠವಾಗಿದ್ದು ಅದು ಒಬ್ಬನ ಬೌದ್ಧಿಕ ಸಾಮರ್ಥ್ಯಕ್ಕೆ ಅನುಗುಣವಾಗಿರುತ್ತದೆ. ಈ ವ್ಯತ್ಯಾಸಗಳ ಪರಿಣಾಮ ಶೋಷಣೆಯ ಸಮಾಜವನ್ನು ರೂಪಿಸುವಂತೆಯೇ ಶೋಷಣಾರಹಿತ ಸಮಾಜದ ಆಶಯವನ್ನು ಕೆಲವರಲ್ಲಿ ಉಂಟು ಮಾಡುತ್ತದೆ.

ಜನಸಂಖ್ಯೆ ಮತ್ತು ಅಸ್ಮಿತೆ

ಜಾಗತಿಕ ಬದಲಾವಣೆಗಳು–ಪಲ್ಲಟಗಳು ಕಳೆದ ಶತಮಾನದ ಆದಿಭಾಗದಲ್ಲೇ ಪ್ರಾರಂಭವಾದವು. ಭಾರತಕ್ಕೆ ಬ್ರಿಟಿಷರು ಬಂದದ್ದರಿಂದ ಆದ ಬದಲಾವಣೆಗಳ ಜೊತೆಗೆ ಯಂತ್ರ ಸಂಸ್ಕೃತಿಯ ಪ್ರವೇಶ, ವೈದ್ಯಕೀಯ ರಂಗದಲ್ಲಿ ಪ್ರಗತಿ ಮತ್ತು ಜನಸಂಖ್ಯೆಯ ಹೆಚ್ಚಳ ಇಡೀ ಸಾಂಸ್ಕೃತಿಕ ಪರಿಸರದ ಬಹುದೊಡ್ಡ ಪಲ್ಲಟಗಳಿಗೆ ಕಾರಣವಾದವು. ಭೌತಿಕ ಪರಿಸರದ ಪಲ್ಲಟಗಳು ಒಂದು ಜನಸಮುದಾಯದಲ್ಲಿ ಬಹಳ ಕಾಲದಿಂದಲೂ ನೆಲೆಗೊಂಡ ಪಾರಂಪರಿಕ ಚಿಂತನಾ ದಾಟಿಯ ಮೇಲೆ ಪ್ರಭಾವ ಬೀರುತ್ತವೆ. ಅನೇಕ ಆಂತರಿಕ ಸಂಘರ್ಷಗಳಿಗೂ ಕಾರಣವಾಗಬಹುದು. ಮೂಢನಂಬಿಕೆಗಳ ವಿಸರ್ಜನೆಯ ಜೊತೆಗೆ ಬದುಕಿನ ಕೆಲವು ಆರೋಗ್ಯಕರ ನಂಬಿಕೆಯ ನೆಲೆಗಳನ್ನು (ಮನುಷ್ಯ ಸಂಬಂಧಗಳ ವಿಷಯದಲ್ಲಿ) ಬಿಟ್ಟುಕೊಡಬೇಕಾದ ಅನಿವಾರ್ಯತೆ ಉಂಟಾಗುತ್ತದೆ. ಬದುಕಿನ ಅರ್ಥ, ಬದುಕಿನ ಬಯಕೆಗಳು ಬದಲಾಗುತ್ತವೆ. ಬಹಳ ಮುಖ್ಯವಾಗಿ ಜನಸಂಖ್ಯೆಯ ಹೆಚ್ಚಳ ಮನುಷ್ಯ ನಡವಳಿಕೆಯನ್ನು ಮೂಲಭೂತವಾಗಿ ಬದಲಾಯಿಸಿಬಿಡುತ್ತದೆ. ಒಂದು ವಿಶಾಲವಾದ ಮನೆಯಲ್ಲಿ ಮೂರು ಜನ ಇದ್ದಾಗ ಮನುಷ್ಯ ಸಂಬಂಧಗಳು ಹೇಗಿರುತ್ತವೆ ಎಂದು ನಾವು ಊಹಿಸಬಹುದು. ಇದೇ ಮನೆಯಲ್ಲಿ ಆರು ಜನ ಸೇರಿದಾಗ ಮನುಷ್ಯ ಸಂಬಂಧಗಳು ಹೇಗಿರುತ್ತವೆ ಅಥವಾ ಇದೇ ಮನೆಯಲ್ಲಿ ಹನ್ನೆರಡು ಅಥವಾ ಇಪ್ಪತ್ತನಾಲ್ಕು ಜನ ಒಟ್ಟಿಗೆ ವಾಸ ಮಾಡುವಾಗ ಮನುಷ್ಯ ಸಂಬಂಧಗಳು ಹೇಗಿರುತ್ತವೆ ಎಂಬುದ ನಾವು ಊಹಿಸಬಲ್ಲೆವು. ಮನೆ ಸಾಕಷ್ಟು ವಿಶಾಲವಾಗಿದೆ ಎಂದು ಭಾವಿಸುವುದರಿಂದ ಮೂರು ಜನರಿದ್ದ ಈ ಮನೆಗೆ ಮತ್ತೆ ಮೂವರು ಬಂದಾಗ ಸಂತೋಷ ಹೆಚ್ಚುತ್ತದೆ; ಸಂಬಂಧಗಳಲ್ಲಿ ಸೌಹಾರ್ದತೆ, ನಯವಿನಯಗಳಿರುತ್ತವೆ. ನಿಃಸ್ವಾರ್ಥವನ್ನು ಮೌಲ್ಯ ಎಂಬ ಕಾರಣಕ್ಕಾಗಿ ಆಚರಣೆ ಮಾಡುವ ಅಗತ್ಯವಿರುವುದಿಲ್ಲ. ಅದೊಂದು ಸಹಜಶೀಲವಾದ ಮೌಲ್ಯವಾಗಿರುತ್ತದೆ. ಏಕೆಂದರೆ ಎಲ್ಲವೂ ಎಲ್ಲರಿಗೂ ಸಾಕಾಗುವಷ್ಟು ಆ ಮನೆಯಲ್ಲಿ ಇರುತ್ತವೆ. ಇದೇ ಮನೆಗೆ ಆರು ಅಥವಾ ಹನ್ನೆರಡು ಜನ ಬಂದು ಸೇರಿದರೆ ಪ್ರತಿಯೊಬ್ಬನೂ ವೈಯಕ್ತಿಕವಾಗಿ ಅಭದ್ರತೆಯನ್ನು ಅನುಭವಿಸುತ್ತಾನೆ. ಪರಸ್ಪರ ತಮ್ಮ ಹಕ್ಕುಗಳನ್ನು ಮಾತಿನ ಮೂಲಕ, ಕೃತಿಯ ಮೂಲಕ ಸ್ಥಿರಪಡಿಸುತ್ತಲೇ ಇರಬೇಕಾದ ಅನಿವಾರ್ಯತೆ ಉಂಟಾಗುತ್ತದೆ. ಸಹಜ ನಿಃಸ್ವಾರ್ಥತೆ ಇದ್ದ ಮನೆಯಲ್ಲಿ ಜನಸಂಖ್ಯೆ

ಹೆಚ್ಚಾದಂತೆ ಸ್ವಾರ್ಥವೂ ಹೆಚ್ಚಾಗತೊಡಗುತ್ತದೆ. ಜೊತೆಗೆ ವ್ಯಕ್ತಿ ತನ್ನದೇ ಸ್ವಸ್ವರೂಪ ಅಥವಾ ಅಸ್ಮಿತೆಯ ಬಗ್ಗೆ ಗಲಿಬಿಲಿಗೆ ಒಳಗಾಗುತ್ತಾನೆ. ನೆಮ್ಮದಿಯ ಪರಿಸರದಲ್ಲಿ ತಾತ್ವಿಕ ನೆಲೆಗಳಿಗೆ ಬದ್ಧವಾಗಿದ್ದ ಅಸ್ಮಿತೆ ಸ್ಪರ್ಧಾತ್ಮಕ ಪರಿಸರದಲ್ಲಿ ಸುಲಭವಾಗಿ ವಸ್ತುಲಾಭವನ್ನು ಒದಗಿಸಿಕೊಡುವ ಅಸ್ಮಿತೆಯಾಗಿ ಪರಿವರ್ತನೆಯಾಗುತ್ತದೆ. ಮನುಷ್ಯ ತನ್ನ ಉದಾತ್ತ ಮುಖವನ್ನು ಸುಲಭವಾಗಿ ತೊರೆದು ಬದುಕುಳಿಯಲು ನೆರವಾಗುವ ಯಾವುದನ್ನೂ ಅರಿಸಿಕೊಳ್ಳಲು ತವಕಿಸುತ್ತಾನೆ. ಜಾಗತೀಕರಣ ಈ ಬಗೆಯ ತವಕಗಳನ್ನು ತನ್ನ ಮೂಲಬಂಡವಾಳವನ್ನಾಗಿ ಮಾಡಿಕೊಂಡು ಮುನ್ನಡೆಯುತ್ತದೆ. ಈ ತವಕಗಳಿಗೆ ಪರಿಸರದ ವಾಸ್ತವತೆಗಳಷ್ಟೇ ಕಾರಣವಾಗಬೇಕಾಗಿಲ್ಲ. ಮನುಷ್ಯನ ದುರಾಸೆಯನ್ನೇ ಬಂಡವಾಳ ಮಾಡಿಕೊಂಡರೆ ಸಾಕು. ಮನುಷ್ಯನ ಮೂಲ ದೌರ್ಬಲ್ಯಗಳೇ ಜಾಗತೀಕರಣದ ಬಂಡವಾಳ.

ಹೀಗೆ ಜಾಗತೀಕರಣದ ಪ್ರಭಾವದಿಂದಾಗಿ ಇಡೀ ಜನಸಮುದಾಯ ತನ್ನ ಅಸ್ಮಿತೆಯನ್ನು ಕಳೆದುಕೊಳ್ಳುತ್ತಿದೆ. ಜನಸಮುದಾಯದ ಮೇಲೆ ಈಗ ಗಾಢವಾಗಿ ಪ್ರಭಾವ ಬೀರುತ್ತಿರುವ ತಾಂತ್ರಿಕ ಸಾಧ್ಯತೆಗಳು ಮತ್ತು ದೊಡ್ಡದಾಗಿ ಬೆಳೆಯಬೇಕು ಎಂಬ ಗೀಳು ಈ ಹೊಸ ಅಸ್ಮಿತೆಯ ಭಾಗವಾಗಿ ರೂಪುಗೊಳ್ಳುತ್ತಿವೆ. ವಾಸ್ತವವಾಗಿ ನೋಡಿದರೆ ಇದೊಂದು ಪಟ್ಟಣವಾಸಿಗಳ ಪಿಡುಗು. ಗ್ರಾಮೀಣ ಪರಿಸರದಲ್ಲಿ ಇನ್ನೂ ಕೂಡ ಸ್ಥಳೀಯ ಸಾಂಸ್ಕೃತಿಕ ಆಚರಣೆಗಳು ಉಳಿದುಕೊಂಡಿವೆ. ನಮ್ಮ ಗ್ರಾಮೀಣ ಮಕ್ಕಳು ಮೊದಲಿಗೆ ತಾವು ಏನು ಎಂಬುದನ್ನು, ಎಂದರೆ ಸಾಂಸ್ಕೃತಿಕವಾಗಿ ತಾವು ಯಾವ ಪರಂಪರೆಗೆ ಸೇರಿದವರು ಎಂಬುದನ್ನು ಬುದ್ಧಿಪೂರ್ವಕವಾಗಿ ಅರಿತುಕೊಂಡು ಆ ಅರಿವು ನೀಡುವ ಆತ್ಮವಿಶ್ವಾಸದ ಮೇಲೆ ತಮ್ಮ ಅಸ್ಮಿತೆಯನ್ನು ಅಥವಾ ಸ್ವಸ್ವರೂಪವನ್ನು ಕಟ್ಟಿಕೊಳ್ಳಬೇಕು. ಇದೊಂದು ಮನಃಶಾಸ್ತ್ರೀಯವಾದ ಅಗತ್ಯ. ಒಂದು ಪರಂಪರೆಗೆ, ಒಂದು ಸಂಸ್ಕೃತಿಗೆ ಸೇರಿದ್ದೇನೆ ಎಂಬುದನ್ನು ಮೌಲ್ಯನಿಷ್ಕರ್ಷೆಗೆ ಒಳಪಡಿಸದೆ, ಇದ್ದದ್ದನ್ನು ಇದ್ದ ಹಾಗೆಯೇ ಅರಿಯುವುದು ಮತ್ತು ಈ ಅರಿವಿನ ಬಗ್ಗೆ ಹುಟ್ಟುವ ಒಂದು ತೆರೆದ ಮನಸ್ಸು ವ್ಯಕ್ತಿತ್ವನಿರ್ಮಾಣದ ಮೊದಲ ಹಂತಗಳಲ್ಲಿ ಬಹಳ ಮುಖ್ಯವಾದದ್ದು. ದಲಿತ ಚಳುವಳಿಯ ಸಂದರ್ಭದಲ್ಲಿ ತಮ್ಮ ಸ್ಥಿತಿಗತಿಗಳನ್ನು ಯಾವ ಮುಚ್ಚುಮರೆಯೂ ಇಲ್ಲದೆ ಅರಿವಿಗೆ ತಂದುಕೊಂಡವರು ಸ್ವತಂತ್ರ ವ್ಯಕ್ತಿತ್ವವನ್ನು ಗಳಿಸಿಕೊಂಡು ಅದ್ಭುತವಾದ ಸೃಜನಶೀಲತೆಯನ್ನು ಮೆರೆದರು ಎಂಬುದು ಈಗ ಇತಿಹಾಸ. ಮತ್ತೆ ಕೆಲವರು ತಮ್ಮ ವಾಸ್ತವ ನೆಲೆಗಳನ್ನು ಮರೆಮಾಚುವ ಮೂಲಕ, ಅದನ್ನು ತಮ್ಮ ಅರಿವಿಗೆ ತಂದುಕೊಳ್ಳದೆ ನಿರಾಕರಿಸುವ ಚಾಕಚಕ್ಯತೆಯನ್ನು ತೋರಿದರು. ಇಂತಹ ಜನ ಯಾವ ಸೃಜನಶೀಲತೆಯೂ ಇಲ್ಲದ ಎಡಬಿಡಂಗಿಗಳಾಗಿ ಅಥವಾ ದಲಿತ ಬ್ರಾಹ್ಮಣರಾಗಿ ಕೊನೆಗೊಂಡಿರುವುದನ್ನು ನಾವು ನೋಡುತ್ತೇವೆ. ಒಟ್ಟಿನಲ್ಲಿ ನಮ್ಮ ಸಾಂಸ್ಕೃತಿಕ ಅಂಶಗಳನ್ನು ಅವುಗಳ ವಾಸ್ತವ ನೆಲೆಗಳಲ್ಲಿ ಅರಿಯುವ ಮೂಲಕ ತಮ್ಮ ಸಾಂಸ್ಕೃತಿಕ ಅಸ್ಮಿತೆಗಳನ್ನು ಗುರುತಿಸಿಕೊಂಡು

ಅದನ್ನೇ ಸೋಪಾನ ಮಾಡಿಕೊಂಡು ಪುಟಿದು ಹೊಸ ಆಯಾಮಕ್ಕೆ ಏರುವುದೇ ನಿಜವಾದ ವ್ಯಕ್ತಿವಿಕಾಸ. ಈ ದೃಷ್ಟಿಯಿಂದ ಗ್ರಾಮೀಣ ಪ್ರದೇಶದ ಸ್ಥಳೀಯ ಸಂಸ್ಕೃತಿ ಬಹಳ ಮುಖ್ಯವಾಗುತ್ತದೆ. ನಮ್ಮ ಶಿಕ್ಷಣ ಇದರ ಮಹತ್ತ್ವವನ್ನು ಮನಗಾಣುವುದು ಅಗತ್ಯ

ಗುಣಾತ್ಮಕ ಶಿಕ್ಷಣ

ನಾವೇ ನಡೆಸುತ್ತಿದ್ದ ಶಾಲೆ. ನಾಲ್ಕನೆಯ ತರಗತಿಯ ಮಕ್ಕಳ ಗಲಾಟೆ ಹೆಚ್ಚಾಗಿದೆ. ಅಧ್ಯಾಪಕರು ಇದ್ದಾರೋ ಇಲ್ಲವೋ, ಏನಾಗುತ್ತಿದೆ ಎಂದು ನೋಡಲು ಹೋದೆ. ತರಗತಿಯ ಅಧ್ಯಾಪಕ ಮಕ್ಕಳಿಗೆ ಕ್ವಿಜ್ ನಡೆಸುತ್ತಿದ್ದಾರೆ. ಅದು ವರ್ಷದ ಕೊನೆ, ಮಾರ್ಚ್ ತಿಂಗಳು. ತಾವು ವರ್ಷವಿಡೀ ಮಾಡಿದ ಪಾಠಗಳನ್ನು ಮಕ್ಕಳು ಹೇಗೆ ಅರಗಿಸಿಕೊಂಡಿದ್ದಾರೆ ಎಂದು ಪರೀಕ್ಷಿಸುವುದರ ಜೊತೆಗೆ ಮುಂಬರುವ ಪರೀಕ್ಷೆಗಳಲ್ಲಿ ಮಕ್ಕಳು ಪ್ರಶ್ನೆಗಳಿಗೆ ಉತ್ತರ ಬರೆಯಲು ಈ ಕ್ವಿಜ್ ಸಹಾಯ ಮಾಡುತ್ತದೆ ಎಂಬುದು ಈ ಅಧ್ಯಾಪಕನ ನಂಬಿಕೆ. ಪ್ರತಿಯೊಂದು ಪ್ರಶ್ನೆಗೂ ಮಕ್ಕಳು ತಾ ಮುಂದು ನಾ ಮುಂದು ಎಂದು ಕೈ ಮೇಲೆತ್ತಿ ಉತ್ತರ ಕೊಡುತ್ತಿದ್ದಾರೆ. ಮಕ್ಕಳಿಗೆ ಯಾವ ಭಯ–ಸಂಕೋಚಗಳೂ ಇಲ್ಲ. ಏಕೆಂದರೆ ನಮ್ಮ ಈ ಶಾಲೆ ಶಿಶುಕೇಂದ್ರಿತ ಶಿಕ್ಷಣದಲ್ಲಿ ನಂಬಿಕೆ ಇಟ್ಟಿದೆ, ಮಕ್ಕಳನ್ನು ಯಾವುದೇ ಕಾರಣಕ್ಕೂ ಹೊಡೆಯುವುದಿರಲಿ, ಗಟ್ಟಿಯಾಗಿ ಬೈಯುವುದೂ ಇಲ್ಲ. ಮಕ್ಕಳ ಸ್ವತಂತ್ರ ಆಲೋಚನೆಗಳಿಗೆ, ಸ್ವತಂತ್ರ ನಿಲುವುಗಳಿಗೆ ಶಿಕ್ಷಕರು ಪ್ರಜ್ಞಾಪೂರ್ವಕವಾಗಿ ಮನ್ನಣೆ ನೀಡುತ್ತಾರೆ. ಈ ಎಲ್ಲ ಕಾರಣದಿಂದ ಮಕ್ಕಳು ಉತ್ಸಾಹದಿಂದ ಪುಟಿಯುತ್ತಿದ್ದಾರೆ. ಧೈರ್ಯವಾಗಿ ಉತ್ತರ ಹೇಳುತ್ತಾರೆ. ನನಗೆ ಬಹಳ ಸಂತೋಷವಾಯಿತು. ಈ ಶಾಲೆಯಲ್ಲಿ ಮಕ್ಕಳ ಕಲಿಕೆ ಚೆನ್ನಾಗಿ ನಡೆಯುತ್ತಿದೆ ಎಂಬುದು ನಿಸ್ಸಂಶಯವಾಗಿ ಕಾಣುತ್ತಿತ್ತು.

ಹೀಗೆ ಪ್ರಶ್ನೆ–ಉತ್ತರ ಸಾಗುತ್ತಿರುವಾಗ ಅಧ್ಯಾಪಕ ಪಾರದರ್ಶಕ ವಸ್ತುಗಳು – ಅಪಾರದರ್ಶಕ ವಸ್ತುಗಳ ಬಗ್ಗೆ ಪ್ರಶ್ನೆ ಕೇಳಿದರು.

ಪ್ರ : ಪಾರದರ್ಶಕ ವಸ್ತುಗಳು ಎಂದರೆ ಯಾವುವು?

ಉ : ಯಾವುದರ ಮೂಲಕ ವಸ್ತುಗಳು ಕಾಣುತ್ತವೆಯೋ ಅವು ಪಾರದರ್ಶಕ ವಸ್ತುಗಳು.

ಪ್ರ : ಅಪಾರದರ್ಶಕ ವಸ್ತುಗಳು ಎಂದರೆ ಯಾವುವು?

ಉ : ಯಾವುದರ ಮೂಲಕ ವಸ್ತುಗಳು ಕಾಣುವುದಿಲ್ಲವೋ ಅವು ಅಪಾರದರ್ಶಕ ವಸ್ತುಗಳು.

ಪಠ್ಯಪುಸ್ತಕದ ನುಡಿಗಟ್ಟನ್ನೆ ಮಕ್ಕಳು ಪುನರುಚ್ಚರಿಸುತ್ತಿದ್ದರು. ನಾನು ಈ ಕ್ವಿಜ್‌ಗೆ ಮತ್ತೊಂದು ಪ್ರಶ್ನೆಯನ್ನು ಸೇರಿಸಿದೆ – ಪಾರದರ್ಶಕ ವಸ್ತುಗಳ ಮೂಲಕ ವಸ್ತುಗಳು ಏಕೆ ಕಾಣುತ್ತವೆ ಮತ್ತು ಅಪಾರದರ್ಶಕ ವಸ್ತುಗಳ ಮೂಲಕ ವಸ್ತುಗಳು ಏಕೆ ಕಾಣುವುದಿಲ್ಲ?

ಎಲ್ಲಾ ಮಕ್ಕಳು ಕೈ ಮೇಲೆತ್ತಿದರು. ಒಬ್ಬೊಬ್ಬರಾಗಿ ಉತ್ತರ ಹೇಳುತ್ತ ಬಂದರು :

ಕಾಣುತ್ತದೆ – ಏಕೆಂದರೆ ಅದು ಪಾರದರ್ಶಕ ವಸ್ತು.

"ಕಾಣುವುದಿಲ್ಲ – ಏಕೆಂದರೆ ಅದು ಅಪಾರದರ್ಶಕ ವಸ್ತು."

ನಾನು ಮತ್ತೆ ಅದೇ ಪ್ರಶ್ನೆಯನ್ನು ಪುನಃ ಕೇಳಿದೆ. ಪಾರದರ್ಶಕ ವಸ್ತುಗಳ ಮೂಲಕ ಏಕೆ ಕಾಣುತ್ತದೆ? ಅಪಾರದರ್ಶಕ ವಸ್ತುಗಳ ಮೂಲಕ ವಸ್ತುಗಳು ಏಕೆ ಕಾಣುವುದಿಲ್ಲ?

ಮಕ್ಕಳು ಕೊಂಚ ತಬ್ಬಿಬಾದರು. ಅಧ್ಯಾಪಕ ಸಪ್ಪೆ ಮುಖ ಹಾಕಿಕೊಂಡು ನಿಂತುಕೊಂಡ. ಆ ತರಗತಿಯಲ್ಲಿದ್ದ ಮಕ್ಕಳೆಲ್ಲ ನಿಜವಾಗಿಯೂ ಬುದ್ಧಿವಂತರೆ. ಅಧ್ಯಾಪಕ ಅನೇಕ ಸಂಜ್ಞೆಗಳನ್ನು ಮಾಡಲು ಪ್ರಯತ್ನಿಸಿದ. ನಾನು ಅಧ್ಯಾಪಕನಿಗೆ ಸುಮ್ಮನಿರುವಂತೆ ಹೇಳಿದೆ. ಮಕ್ಕಳೇ ಯೋಚಿಸಿ ಹೇಳಲಿ ಎಂದು ಆ ತರಗತಿಗೆ ಗಾಜಿನ ಹಾಳೆಯನ್ನು ತರಿಸಿದೆ. ಮೊಂಬತ್ತಿ ಹಚ್ಚಿ ಗಾಜಿನ ಹಿಂದೆ ಇಟ್ಟೆ. "ಉರಿಯುತ್ತಿರುವ ಈ ಮೊಂಬತ್ತಿ ನಿಮಗೆ ಕಾಣುತ್ತಿದೆಯೆ" ಎಂದು ಕೇಳಿದೆ. "ಕಾಣುತ್ತಿದೆ; ಏಕೆಂದರೆ ಗಾಜು ಪಾರದರ್ಶಕ ವಸ್ತು" ಎಂದರು ಮಕ್ಕಳು. ಒಂದು ಪುಸ್ತಕವನ್ನು ಅಡ್ಡಲಾಗಿ ಹಿಡಿದು "ಈಗ ಮೊಂಬತ್ತಿ ಕಾಣುತ್ತಿದೆಯೆ" ಎಂದು ಕೇಳಿದೆ. ಮಕ್ಕಳು ಹೇಳಿದರು "ಮೊಂಬತ್ತಿ ಕಾಣುವುದಿಲ್ಲ, ಏಕೆಂದರೆ ಪುಸ್ತಕ ಅಪಾರದರ್ಶಕ ವಸ್ತು."

ನಾನು ಅದೇ ಪ್ರಶ್ನೆಯನ್ನು ಪುನಃ ಮುಂದಿಟ್ಟೆ. ಪಾರದರ್ಶಕ ವಸ್ತುವಿನ ಮೂಲಕ ಎಂದರೆ ಈ ಗಾಜಿನ ಮೂಲಕ ಉರಿಯುತ್ತಿರುವ ಮೇಣದ ಬತ್ತಿ ಏಕೆ ಕಾಣುತ್ತದೆ; ಪುಸ್ತಕದ ಮೂಲಕ ಏಕೆ ಕಾಣುವುದಿಲ್ಲ?

ಎಲ್ಲ ಮಕ್ಕಳು ಉತ್ತರಿಸಿದ್ದು – ಮನುಷ್ಯ ತನ್ನ ಅನುಕೂಲಕ್ಕಾಗಿ ಕೆಲವು ಪಾರದರ್ಶಕ ವಸ್ತುಗಳನ್ನು, ಕೆಲವು ಅಪಾರದರ್ಶಕ ವಸ್ತುಗಳನ್ನು ತಯಾರಿಸಿರುತ್ತಾನೆ. ಪಾರದರ್ಶಕ ವಸ್ತುಗಳ ಮೂಲಕ ವಸ್ತು ಕಾಣುತ್ತದೆ. ಅಪಾರದರ್ಶಕ ವಸ್ತುವಿನ ಮೂಲಕ ವಸ್ತು ಕಾಣುವುದಿಲ್ಲ. ಇದನ್ನೂ ಸಹ ಈ ಅಧ್ಯಾಪಕ ಪಠ್ಯ ಪುಸ್ತಕದಲ್ಲಿರುವಂತೆಯೇ ತಿಳಿಸಿಕೊಟ್ಟಿದ್ದ, ಅದನ್ನೆ ಮಕ್ಕಳು ಪುನರುಚ್ಚರಿಸಿದರು.

ನಾನು ಎಷ್ಟೇ ಪ್ರಯತ್ನಪಟ್ಟರೂ ಮಕ್ಕಳಿಂದ ನಿರೀಕ್ಷಿತ ಉತ್ತರ ದೊರೆಯಲಿಲ್ಲ. ಅನಂತರ ವಸ್ತುಗಳು ನಮ್ಮ ಕಣ್ಣಿಗೆ ಹೇಗೆ ಕಾಣುತ್ತದೆ ಎಂಬ ಬಗ್ಗೆ ಚರ್ಚೆ ಪ್ರಾರಂಭಿಸಿದೆ. "ಕತ್ತಲಲ್ಲಿ ವಸ್ತುಗಳು ಕಾಣುತ್ತವೆಯೆ" ಎಂದು ಕೇಳಿದೆ. ವಂದನಾ ಹೇಳಿದಳು "ನನ್ನ ಕಣ್ಣು ಚೆನ್ನಾಗಿದೆ ಕತ್ತಲಲ್ಲೂ ನನಗೆ ವಸ್ತುಗಳು ಕಾಣುತ್ತವೆ". ಕೆಲವು ಮಕ್ಕಳು ಇದನ್ನು ಪ್ರಶ್ನಿಸಿದರು. ರಾತ್ರಿ ಮಲಗುವ ಮುನ್ನ ಕೋಣೆಯ ದೀಪ ಆರಿದಾಗ ಏನೂ

ಕಾಣುವುದಿಲ್ಲವಲ್ಲ ಎಂದು ಆಕೆಯ ಗೆಳತಿಯರು ಹೇಳಿದರು. ಇನ್ನು ಕೆಲವು ಮಕ್ಕಳು ಸೂರ್ಯನ ಬೆಳಕಿನಲ್ಲಿ ಮಾತ್ರ ನಮಗೆ ವಸ್ತುಗಳು ಕಾಣುತ್ತವೆ ಎಂಬ ವಾದ ಮುಂದಿಟ್ಟರು. ಸೂರ್ಯ ಇಲ್ಲದಾಗ ವಿದ್ಯುತ್ ದೀಪಗಳಿಂದ ವಸ್ತುಗಳು ಕಾಣುತ್ತವೆ ಎಂದು ಪವನ್ ಹೇಳಿದ. ಹೀಗೆ ಚರ್ಚೆ ನಡೆಯಿತು.

ಒಟ್ಟಿನಲ್ಲಿ ವಸ್ತುಗಳು ಬೆಳಕಿನಿಂದಾಗಿ ನಮ್ಮ ಕಣ್ಣಿಗೆ ಕಾಣಿಸುತ್ತವೆ ಎಂಬ ಮೂಲ ಪರಿಕಲ್ಪನೆ ಮಕ್ಕಳಲ್ಲಿ ಉಂಟಾಗಿಯೇ ಇರಲಿಲ್ಲ. ವಸ್ತುಗಳ ಮೇಲೆ ಬಿದ್ದ ಬೆಳಕು ನಮ್ಮ ಕಣ್ಣನ್ನು ಪ್ರವೇಶಿಸುವುದರಿಂದ ನಮ್ಮ ಅಕ್ಷಿಪಟಲದ ಮೇಲೆ ಚಿತ್ರ ಮೂಡುತ್ತದೆ. ಹಾಗಾಗಿ ವಸ್ತುಗಳು ನಮ್ಮ ಕಣ್ಣಿಗೆ ಕಾಣುತ್ತವೆ ಎಂಬ ಪರಿಕಲ್ಪನೆಯನ್ನು ಮೊದಲು ಮಕ್ಕಳಲ್ಲಿ ಮೂಡಿಸದೆ ಮಕ್ಕಳು ಪಾರದರ್ಶಕ-ಅಪಾರದರ್ಶಕ ವಸ್ತುಗಳ ದೊಡ್ಡ ಪಟ್ಟಿಯನ್ನು ಮಾಡಿದರೆ ಏನು ಪ್ರಯೋಜನ?

ನಾನು ಅಧ್ಯಾಪಕನನ್ನು ಕೇಳಿದೆ : "ನೀವೇಕೆ ಒಂದು ದೊಡ್ಡ ಕಪ್ಪು ಬಟ್ಟೆಯನ್ನು ತಂದು ಮಗುವಿಗೆ ಪೂರ್ತಿಯಾಗಿ ಹೊದಿಸಿ ಕತ್ತಲು ಮಾಡಿ ನಿಮಗೇನಾದರೂ ಕಾಣುತ್ತದೆಯೇ ಅಥವಾ ಇಲ್ಲವೇ? ಎಂದು ಕೇಳಲಿಲ್ಲ? ಕೇವಲ ಪಾರದರ್ಶಕ – ಅಪಾರದರ್ಶಕ ವಸ್ತುಗಳ ಬಗ್ಗೆ ಹೇಳುತ್ತಿದ್ದೀರಿ. ಆದರೆ ಏಕೆ ಕೆಲವು ವಸ್ತುಗಳು ಪಾರದರ್ಶಕವಾಗಿವೆ, ಕೆಲವು ವಸ್ತುಗಳು ಅಪಾರದರ್ಶಕವಾಗಿವೆ ಎಂಬ ಪ್ರಶ್ನೆಯನ್ನು ನೀವು ಮಕ್ಕಳಿಗೆ ಹಾಕಲಿಲ್ಲವಲ್ಲ, ಏಕೆ?"

ಆ ಅಧ್ಯಾಪಕ ಹೇಳಿದ "ಸರ್, ಅದು ಐದನೇ ತರಗತಿಯ ಸಿಲಬಸ್. ನಾಲ್ಕನೇ ತರಗತಿಗೆ ಇದು ಬರುವುದಿಲ್ಲ"! ಸಿಲಬಸ್ ಪ್ರಕಾರ ತಾನು ನಿಷ್ಠೆಯಿಂದ ಪಾಠ ಮಾಡುತ್ತಿರುವ ಕುರಿತು ಸಮಜಾಯಿಶಿ ಅವನ ಧ್ವನಿಯಲ್ಲಿತ್ತು. ಈ ನಿಷ್ಠೆ ನನಗೆ ಒಂದು ಅನಿಷ್ಟವಾಗಿ ಕಾಣುತ್ತಿತ್ತು. ಏಕೆಂದರೆ ಇದು ನಿಜವಾದ ಜ್ಞಾನಾರ್ಜನೆಯ ಸಂತೋಷವನ್ನು ಕಸಿದುಕೊಂಡಿತ್ತು. ಮಕ್ಕಳಿಗೆ ತಿಳಿಸಿ ಹೇಳುತ್ತ ಸಂತೋಷಪಡುವ ಅವಕಾಶವನ್ನು ಹೊಸಕಿ ಹಾಕಿತ್ತು.

ಬೆಳಕಿನಲ್ಲಿ ನೋಡುವ ಕ್ರಿಯೆ ಎಷ್ಟು ಸಹಜವಾಗಿದೆ ಎಂದರೆ ಅದಕ್ಕೊಂದು ವಿಶ್ಲೇಷಣೆ ಬೇಕೆಂದು ಮಕ್ಕಳಿಗೆ ಅನಿಸುವುದೇ ಇಲ್ಲ. ಮೇಲೆ ಎಸೆದ ವಸ್ತುಗಳು ಕೆಳಗೆ ಬೀಳುವುದನ್ನು ಇಡೀ ಮನುಷ್ಯ ಜನಾಂಗ ನ್ಯೂಟನ್ ಬರುವವರೆಗೂ ಪ್ರಶ್ನಿಸಲೇ ಇಲ್ಲ. ಅದೊಂದು ಸಹಜ ವಿದ್ಯಮಾನ ಎಂದು ಭಾವಿಸಿ ಸುಮ್ಮನೆ ಇತ್ತು. ನ್ಯೂಟನ್ ಈ ವಿದ್ಯಮಾನವನ್ನು ಪ್ರಶ್ನಿಸಿದ. ಹಾಗಾಗಿ ಅತ್ಯಂತ ಗಂಭೀರವಾದ ವಿಜ್ಞಾನದ ಹೊಸ ಜಗತ್ತೊಂದು ನಮ್ಮ ಮುಂದೆ ತೆರೆದುಕೊಂಡಿತು.

ಬೆಳಕಿನಲ್ಲಿ ವಸ್ತುಗಳು ಕಾಣುವುದು ಅತ್ಯಂತ ಸಹಜ ಸಂಗತಿಯಾಗಿದ್ದು, ಈ ವಿದ್ಯಮಾನದ ಬಗ್ಗೆ ಪ್ರಶ್ನೆಗಳು ಹುಟ್ಟುವುದೇ ಇಲ್ಲ. ಹೀಗೆ ಪ್ರಶ್ನೆ ಹುಟ್ಟುವಂತಹ ಒಂದು ವಾತಾವರಣವನ್ನು ನಿರ್ಮಿಸುವುದೇ ಶೈಕ್ಷಣಿಕ ಚಟುವಟಿಕೆ. ಅಧ್ಯಾಪಕನೊಬ್ಬ ಇಂತಹ ಚಟುವಟಿಕೆಯನ್ನು ಸೃಷ್ಟಿಸದೆ ಹೋದರೆ, ಅದನ್ನು ಮಕ್ಕಳನ್ನೆಲ್ಲ ಸೇರಿಸಿ ಮಾಡಿಸದೆ

ಹೋದರೆ ಬೆಳಕಿಗೆ ಸಂಬಂಧಪಟ್ಟ ಮೂಲ ವೈಜ್ಞಾನಿಕ ಪರಿಕಲ್ಪನೆ – "ಬೆಳಕಿನ ಸಹಾಯದಿಂದ ಮಾತ್ರ ನಾವು ನೋಡಬಹುದು" ಎಂಬುದು ಮಕ್ಕಳ ಮನಸ್ಸಿನಲ್ಲಿ ಬೇರೂರುವುದೇ ಇಲ್ಲ. ಇಂತಹ ಒಂದು ಪ್ರಶ್ನೆ ಅಧ್ಯಾಪಕನಿಗೆ ಎಂದೂ ಬರದೆಹೋದರೆ ಅದರ ಕುರಿತಾಗಿ ಚರ್ಚೆ ಸಾಧ್ಯವಾಗುವುದಾದರೂ ಹೇಗೆ? ಈ ಸಾಧ್ಯತೆಯನ್ನೇ ಕಾಣದಾದಾಗ ಕುರುಡು ಪಾಠ (Rote Learning) ಒಂದೇ ಶಿಕ್ಷಣದ ಸಾಧ್ಯತೆಯಾಗುತ್ತದೆ.

ಶಾಲೆಯ ಆಡಳಿತ ಅಧ್ಯಾಪಕನಿಗೆ ಬಗೆ ಬಗೆಯ ಭೌತಿಕ ಸವಲತ್ತುಗಳನ್ನು, ಸಂಪನ್ಮೂಲಗಳನ್ನು ಒದಗಿಸಿಕೊಡಬಹುದು. ಕೇಳುವ ವಸ್ತುಗಳನ್ನೆಲ್ಲ ತಂದುಕೊಡಬಹುದು. ಅಪಾರವಾಗಿ ಹಣ ಖರ್ಚು ಮಾಡಬಹುದು. ಆದರೆ ಅಧ್ಯಾಪಕನಲ್ಲೆ 'ಒಳಗಿನ ಬೆಳಕು' ಇಲ್ಲವಾದರೆ ಆ ಬೆಳಕನ್ನು ತಂದು ಕೊಡುವುದಾದರೂ ಹೇಗೆ?

ಇಂತಹ ಅಧ್ಯಾಪಕರಲ್ಲೂ ಸಾಧ್ಯತೆಗಳನ್ನು ನಾವು ಗುರುತಿಸಬೇಕು. ಅವರೊಡನೆ ಮೇಲೆ ಉಲ್ಲೇಖಿಸಿದ ತರಗತಿ ಸಂವಹನ ಕುರಿತು ಚರ್ಚಿಸಬೇಕು. ಮಕ್ಕಳಿಗೆ ಹೇಳಿ ಕೊಡುವಾಗ ಹೇಗೆ ಮಕ್ಕಳ ಕಣ್ಣಿನ ಮೂಲಕವೇ ಇಡೀ ಜಗತ್ತನ್ನು ನಾವು ನೋಡಲು ಸಾಧ್ಯವಾಗಬೇಕು ಎಂಬುದನ್ನು ಕುರಿತು ಚಿಂತಿಸಿ ಚರ್ಚೆ ಮಾಡಬೇಕು. ಒಂದು ಮೂಲ ಪರಿಕಲ್ಪನೆಯ ಬಗ್ಗೆ ಮಗುವಿಗೆ ಸ್ಪಷ್ಟತೆ ಮೂಡಿದರೆ ಅನಂತರ ಅದೇ ವಿಷಯಕ್ಕೆ ಸಂಬಂಧಪಟ್ಟಂತೆ ಮಗುವಿನ ಜ್ಞಾನ ಅರ್ಥವತ್ತಾಗಿ ವಿಸ್ತಾರಗೊಳ್ಳುತ್ತದೆ ಮತ್ತು ಸಮಗ್ರವಾಗಿರುತ್ತದೆ. ಪರಿಪೂರ್ಣ ಜ್ಞಾನ ಉಂಟಾಗಬೇಕಾದರೆ ಮೂಲ ಪರಿಕಲ್ಪನೆಯನ್ನು ಸ್ಪಷ್ಟವಾಗಿ ಅರಿತು ಆ ಅರಿವಿನ ಆಧಾರದ ಮೇಲೆ ಮುಂದುವರಿದ ಕಲಿಕೆಗಳು ಸಾಧ್ಯವಾಗಬೇಕು. ಬೆಳಕಿನಿಂದಾಗಿ ವಸ್ತುಗಳು ಕಾಣುತ್ತವೆ ಎಂಬುದು ಮೂಲ ಪರಿಕಲ್ಪನೆ. ಕೆಲವು ವಸ್ತುಗಳ ಹಿಂದೆ ಇರುವ ಪದಾರ್ಥಗಳು ನಮಗೆ ಕಾಣುತ್ತವೆ ಎಂದ ಮೇಲೆ ಬೆಳಕು ಈ ವಸ್ತುಗಳ ಮೂಲಕ ಹಾದುಬರುತ್ತದೆ; ಇಂತಹ ವಸ್ತುಗಳನ್ನು ನಾವು ಪಾರದರ್ಶಕ ವಸ್ತುಗಳು ಎಂದು ಕರೆಯುತ್ತೇವೆ ಎಂದು ಮಕ್ಕಳು ಅರಿಯುತ್ತಾರೆ.

ಹಾಗೆಯೇ ಕೆಲವು ವಸ್ತುಗಳ ಹಿಂಬದಿಯಲ್ಲಿರುವ ಪದಾರ್ಥಗಳು ನಮಗೆ ಕಾಣುವುದಿಲ್ಲ. ಏಕೆಂದರೆ ಈ ವಸ್ತುಗಳ ಮೂಲಕ ಬೆಳಕು ಹಾದು ಬರುವುದಿಲ್ಲ. ಈ ಪದಾರ್ಥಗಳನ್ನು ಅಪಾರದರ್ಶಕ ವಸ್ತುಗಳು ಎಂದು ನಾವು ಕರೆಯುತ್ತೇವೆ ಎಂದು ಮಕ್ಕಳಿಗೆ ತಿಳಿಯುತ್ತದೆ.

ಅಧ್ಯಾಪಕ ಇಂತಹ ಒಂದು ವಿಶ್ಲೇಷಣೆ ಮಾಡುವ ಗೋಜಿಗೆ ಹೋಗಲೇ ಇಲ್ಲ. ಅವನಿಗೆ ಈ ಪ್ರಶ್ನೆಗಳು ಗಂಭೀರವಾಗಿ ಕಾಣಲೇ ಇಲ್ಲ. ಮಕ್ಕಳು ಯಾವುದು ಪಾರದರ್ಶಕ ಯಾವುದು ಅಪಾರದರ್ಶಕ ಎಂದು ಹೇಳಿದರೆ ಸಾಕು, ಈ ಅಧ್ಯಾಪಕನಿಗೆ ತೃಪ್ತಿಯಾಗುತ್ತಿತ್ತು. ಈ ಅಧ್ಯಾಪಕ ಪಠ್ಯಪುಸ್ತಕದ ಚೌಕಟ್ಟನ್ನು ಬಿಟ್ಟು ಹೊರಗೆ ಹೋಗಲೇ ಇಲ್ಲ. ಹಾಗಾಗಿ ಯಾವ ಪರಿಕಲ್ಪನೆಯನ್ನು ಮಕ್ಕಳು ತಮ್ಮ ಅರಿವಿಗೆ ತಂದುಕೊಳ್ಳಬೇಕಾಗಿತ್ತೋ ಅದನ್ನು

ಪಡೆಯಲೇ ಇಲ್ಲ. ಒಂದು ವೇಳೆ ಮಗು ಬೆಳಕಿನ ಕಾರಣದಿಂದಾಗಿ ವಸ್ತುಗಳು ನಮಗೆ ಕಾಣುತ್ತದೆ ಎಂದು ಸ್ಪಷ್ಟವಾಗಿ ಅರಿತರೆ ಆಗ ಪಾರದರ್ಶಕ ಹಾಗೂ ಅಪಾರದರ್ಶಕ ವಸ್ತುಗಳ ಬಗ್ಗೆ ಹೊಸ ಪ್ರಶ್ನೆಗಳು ಹುಟ್ಟುತ್ತವೆ. ಉದಾಹರಣೆಗೆ ಮಕ್ಕಳು ಕೇಳಬಹುದು – ಗಾಜಿನಂತಹ ಪಾರದರ್ಶಕ ವಸ್ತುಗಳ ಮೂಲಕ ಬೆಳಕು ಏಕೆ ಹಾದುಬರುತ್ತದೆ? ಆದರೆ ಅದಕ್ಕಿಂತ ತೆಳ್ಳಗಿರುವ ಒಂದು ಕಾಗದದ ಹಾಳೆಯ ಮೂಲಕ ಬೆಳಕು ಏಕೆ ಹಾಯುವುದಿಲ್ಲ? ಇಂತಹ ಸಮಂಜಸವಾದ ಪ್ರಶ್ನೆ ಮಕ್ಕಳ ಮನಸ್ಸಿನಲ್ಲಿ ಮೂಡಬೇಕಾದರೆ ಅವರಿಗೆ ಬೆಳಕಿನ ಬಗ್ಗೆ ಸ್ಪಷ್ಟವಾದ ಒಂದು ಮೂಲ ವೈಜ್ಞಾನಿಕ ಪರಿಕಲ್ಪನೆ ಮೂಡಬೇಕು. ಹೀಗೆ ಒಂದು ಸ್ಪಷ್ಟವಾದ ವೈಜ್ಞಾನಿಕ ಪರಿಕಲ್ಪನೆ ಮೂಡಿದರೆ ಮಕ್ಕಳು ಹೆಚ್ಚಿನ ಕಲಿಕೆಯನ್ನು ಹುಡುಕುತ್ತ ಹೋಗುತ್ತಾರೆ. ಹೊಸ ಹೊಸ ಪ್ರಶ್ನೆಗಳನ್ನು ಕೇಳುತ್ತಾರೆ. ನಿಜವಾದ ಶಿಕ್ಷಣ ಎಂದರೆ ಎಲ್ಲ ಪ್ರಶ್ನೆಗಳಿಗೂ ಸಿದ್ಧ ಉತ್ತರಗಳನ್ನು ಕೊಡುವುದಲ್ಲ. ಆದರೆ ಮಕ್ಕಳಿಗೂ ಸಹ ಪ್ರಶ್ನೆ ಹುಟ್ಟುವಂತಹ ಒಂದು ವಾತಾವರಣವನ್ನು ಚಟುವಟಿಕೆಯ ಮುಖಾಂತರ ಸೃಷ್ಟಿಸುವುದೇ ಶಿಕ್ಷಣವಾಗುತ್ತದೆ. ಸದಾಕಾಲವೂ ಉತ್ತರ ಕೊಡುವ ಗೀಳನ್ನು ರೂಢಿ ಮಾಡಿಕೊಂಡ ನಮ್ಮ ಅಧ್ಯಾಪಕರು ಪ್ರಶ್ನೆಗಿಂತ ಉತ್ತರಗಳನ್ನು ಮುಖ್ಯ ಎಂದು ಪರಿಗಣಿಸುತ್ತಾರೆ. ಏಕೆಂದರೆ ಪರೀಕ್ಷಾ ಪದ್ಧತಿಗೆ ಈ ಅಧ್ಯಾಪಕರು ಹೊಂದಿಕೊಂಡಿರುತ್ತಾರೆ. ನಿಜವಾದ ವಿಜ್ಞಾನ ಎಂದರೆ ಉತ್ತರ ಸಿಕ್ಕದ ಪ್ರಶ್ನೆಗಳೇ ಹೊರತು ಸಿದ್ಧ ಉತ್ತರಗಳಲ್ಲ.

ತನ್ನ ಜ್ಞಾನದ ಪರಿಮಿತಿಯ ಅರಿವು

ಬಹುತೇಕ ಅಧ್ಯಾಪಕರು ಮಕ್ಕಳಿಗೆ ಸರಳವಾಗಿರುವ ವಿಷಯಗಳನ್ನು ಮಾತ್ರ ಹೇಳಬೇಕು, ಕ್ಲಿಷ್ಟವಾದ ವಿಚಾರಗಳು ಅವರಿಗೆ ಅರ್ಥವಾಗುವುದಿಲ್ಲ ಎಂಬ ಸಾಮಾನ್ಯ ಸೂತ್ರವನ್ನು ಅನುಸರಿಸುತ್ತಾರೆ. ಹಾಗಾಗಿ ವಿಷಯಗಳ ಆಳಕ್ಕೆ ಹೋಗಿ ಮಕ್ಕಳೊಡನೆ ಚರ್ಚಿಸುವುದೇ ಇಲ್ಲ. ಕೆಲವೊಮ್ಮೆ ಅಧ್ಯಾಪಕರ ಅರಿವಿನ ಪರಿಮಿತಿಯೇ ಇದಕ್ಕೆ ಕಾರಣವಾಗಿರಬಹುದು. ಆದ್ದರಿಂದ ಈ ಸೂತ್ರದನ್ವಯ ಮಕ್ಕಳಿಗೆ ಹೊರೆಯಾಗದಿರಲಿ ಎಂದು ವಿಷಯಗಳನ್ನು ಸರಳೀಕರಿಸಿರುವುದಾಗಿ ಅಧ್ಯಾಪಕರು ಹೇಳುತ್ತಾರೆ. ಯಾವುದೇ ಒಂದು ವಿಷಯವನ್ನು ತಲಸ್ಪರ್ಶಿಯಾಗಿ ಅರಿಯಬೇಕಾದರೆ ಆ ವಿಷಯದ ಆಳಕ್ಕೆ ಹೋಗಲೇಬೇಕು. ಅಧ್ಯಾಪಕನಾದವನು ಇಂತಹ ಆಳಕ್ಕೆ ಧುಮುಕಿ ಜ್ಞಾನ ಸರೋವರದಲ್ಲಿ ಮಿಂದು ಬಂದವನಾದರೆ ಮಕ್ಕಳಿಗೆ ಯಾವುದನ್ನು ಎಷ್ಟು ಹೇಳಬೇಕು ಎಂಬ ಸ್ಪಷ್ಟ ಅರಿವು ಇರುತ್ತದೆ. ಇದು ಹೇಗೆಂದರೆ ಒಂದು ದೊಡ್ಡ ಕಟ್ಟಡವನ್ನು ನಿರ್ಮಾಣ ಮಾಡುವ ಇಂಜಿನಿಯರ್ ಆ ಕಟ್ಟಡದ ಸಮಗ್ರ ಯೋಜನೆಯನ್ನು ಮನಸ್ಸಿನಲ್ಲಿ ಧರಿಸಿ, ಈ ಕಟ್ಟಡದ ಅರ್ಧಭಾಗವನ್ನು ಮಾತ್ರ ಕಟ್ಟಬೇಕಾದ ಪ್ರಮೇಯ ಬಂದಾಗ ಮುಂದಿನ ಕಟ್ಟಡ ನಿರ್ಮಾಣಕ್ಕೆ ಸರಿಯಾದ ಅವಕಾಶ ಮಾಡಿಕೊಟ್ಟು ಅರ್ಧಕ್ಕೆ ನಿಲ್ಲಿಸಿರುತ್ತಾನೆ. ಇದೇ ಕಟ್ಟಡದ ಸಮಗ್ರ ಯೋಜನೆಯನ್ನರಿಯದ ಅಡ್ಡಕಸಬಿ ಇಂಜಿನಿಯರ್ ಹೀಗೆ

ಅರ್ಧಕ್ಕೆ ನಿಲ್ಲಿಸಿದರೆ, ಈ ಕಟ್ಟಡವನ್ನು ಮತ್ತೊಬ್ಬ ಇಂಜಿನಿಯರ್ ಪೂರ್ಣಗೊಳಿಸಲು ಈಗಾಗಲೇ ಕಟ್ಟಿದ ಕೆಲವು ಭಾಗಗಳನ್ನು ಒಡೆದು ಮಾರ್ಪಾಟು ಮಾಡಬೇಕಾಗುತ್ತದೆ ಅಥವಾ ಮಿತಿಮೀರಿದ ಸಂದರ್ಭದಲ್ಲಿ ಅರೆಮುಗಿದ ಕಟ್ಟಡವನ್ನು ಸಂಪೂರ್ಣವಾಗಿ ಒಡೆದು ಹೊಸದಾಗಿ ಕಟ್ಟಡವನ್ನು ಕಟ್ಟಬೇಕಾಗುತ್ತದೆ.

ಮಕ್ಕಳ ಮನಸ್ಸಿನಲ್ಲಿ ಜ್ಞಾನ ನಿರ್ಮಾಣವಾಗುವ ಸಂದರ್ಭದಲ್ಲೂ ಹೀಗೆಯೇ ಆಗಬಹುದು. ಒಂದು ವಿಷಯದ ಕುರಿತಾದ ಜ್ಞಾನವನ್ನು ಮಕ್ಕಳಿಗೆ ಕೊಡಬೇಕಾದರೆ ಮಕ್ಕಳಿಗೆ ತಿಳಿಯುತ್ತದೆ ಅಥವಾ ಮಕ್ಕಳಿಗೆ ತಿಳಿಯುವುದಿಲ್ಲ ಎಂಬುದು ಪ್ರಶ್ನೆಯಲ್ಲ. ನಿಜವಾದ ಪ್ರಶ್ನೆ ಏನೆಂದರೆ ಅಧ್ಯಾಪಕನಿಗೇ ಅದು ಸಮಗ್ರವಾಗಿ ತಿಳಿದಿದೆಯೆ? ಅಧ್ಯಾಪಕ ಈ ಕುರಿತು ತಾನೇ ಚಿಂತಿಸಿ ತನಗೆಷ್ಟು ಗೊತ್ತು ಎಷ್ಟು ಗೊತ್ತಿಲ್ಲ ಎಂಬ ನಿಷ್ಕರ್ಷೆಗೆ ಬರಬೇಕು. ಜ್ಞಾನ ಎಂಬುದು ವಿಷಯವನ್ನು ಸವಿಸ್ತಾರವಾಗಿ ಅರಿಯುವುದಷ್ಟೇ ಅಲ್ಲ; ಆ ವಿಷಯ ಕುರಿತಾಗಿ ತನ್ನ ಪರಿಮಿತಿಗಳನ್ನು ತಾನೇ ಅರಿಯುವುದು ಕೂಡ ಜ್ಞಾನವಾಗುತ್ತದೆ. ಸಾಕ್ರಟೀಸ್ ಜ್ಞಾನಿ; ಆದರೂ ಅವನಿಗೆ ತನ್ನ ಜ್ಞಾನದ ಪರಿಮಿತಿಗಳ ಅರಿವಿತ್ತು. ಆತ ಹೇಳುತ್ತಿದ್ದ: 'ನನಗೇನೂ ಗೊತ್ತಿಲ್ಲ ಎಂಬುದಷ್ಟೇ ನನಗೆ ಗೊತ್ತು.' ತನ್ನ ಜ್ಞಾನದ ಪರಿಮಿತಿಗಳ ಸ್ಪಷ್ಟ ಅರಿವಿರುವ ಅಧ್ಯಾಪಕ ಜ್ಞಾನದ ಮೊದಲ ಕೆಲವು ಮೆಟ್ಟಿಲುಗಳನ್ನು ಸರಿಯಾಗಿ ನಿರ್ಮಿಸಿಕೊಳ್ಳಲು ಮಕ್ಕಳಿಗೆ ಸಹಾಯ ಮಾಡುತ್ತಾನೆ. ಮುಂದಿನ ಮೆಟ್ಟಿಲುಗಳನ್ನು ಮೊದಲ ಈ ಕೆಲವು ಮೆಟ್ಟಿಲುಗಳನ್ನು ಒಡೆಯದೆ ಮಾರ್ಪಾಟು ಮಾಡದೆ ಅವುಗಳನ್ನೆ ಆಧಾರವಾಗಿಟ್ಟುಕೊಂಡು ರಚಿಸಬಹುದು. ಇದು ಜ್ಞಾನದ ಪರಿಮಿತಿಯನ್ನು ಅರಿಯುವುದರಿಂದ ಹುಟ್ಟುವ ಸಮರ್ಪಕವಾದ ಜ್ಞಾನ.

ಕೆಲವು ಶಾಲೆಗಳು ತಮ್ಮ ಶ್ರೇಷ್ಠತೆಯನ್ನು ಮೆರೆಯಲು ಅಥವಾ ಉಳ್ಳವರ ಮಕ್ಕಳಿಂದ ಅತಿ ಹೆಚ್ಚು ಹಣ ಕೀಳಲು 'ಹೈ ಸ್ಟ್ಯಾಂಡರ್ಡ್ ಎಜುಕೇಷನ್' ಕೊಡುತ್ತೇವೆ ಎಂದು ಹೇಳಿಕೊಳ್ಳುತ್ತಾರೆ. ಇವರು ಮಕ್ಕಳಿಗೆ ತಿಳಿಯಲಿ ಬಿಡಲಿ ತಮ್ಮ ಹೈ ಸ್ಟಾಂಡರ್ಡ್‌ಗೆ ಅನುಗುಣವಾಗಿ 'ಹೆಚ್ಚು–ಅತಿಹೆಚ್ಚು' ಎತ್ತರದ ವಿಷಯಗಳನ್ನು ಮಕ್ಕಳಿಗೆ ಬೋಧಿಸುತ್ತಾರೆ. ಇದು ಮಕ್ಕಳಿಗೆ ಅರ್ಥವಾಗಲೇಬೇಕು ಎಂದೇನೂ ಅಲ್ಲ. ಪರೀಕ್ಷೆಯಲ್ಲಿ ಗಿಳಿಪಾಠ ಒಪ್ಪಿಸಿದರೆ ಸಾಕು.

ಹೀಗೆ ಶಿಕ್ಷಣ ಎಂಬುದು ಹಲವು ಬಗೆಯ ನಿರೀಕ್ಷೆಗಳ ಒತ್ತಡದಲ್ಲಿ ಸಾಗುತ್ತಿದೆ. ಮಕ್ಕಳು ಬಡವಾಗುತ್ತಿದ್ದಾರೆ. ಪೋಷಕರು ಸಂಭ್ರಮಿಸುತ್ತಿದ್ದಾರೆ. ಶಿಕ್ಷಣ ಹೀಗೆ ಹದಗೆಡಲು ಪೋಷಕರ ದುರಾಸೆಯೇ ಕಾರಣ. ಶಿಕ್ಷಣಸಂಸ್ಥೆಗಳು ಶಿಕ್ಷಣವನ್ನು ಬಿಕರಿ ಮಾಡುತ್ತಿರುವುದರಿಂದ ಅವು ಪೋಷಕರ ಅಪೇಕ್ಷೆಗಳನ್ನು ಪೂರೈಸುವ ಕೇಂದ್ರಗಳಾಗಿವೆ. ಇಂತಹ ವಾತಾವರಣದಲ್ಲಿ ಶಿಕ್ಷಕ–ಶಿಕ್ಷಣ–ಮಕ್ಕಳು ಮತ್ತು ಸಮಾಜ ಅನಾರೋಗ್ಯದಿಂದ ಬಳಲುವಂತಾಗಿದೆ.

ತರಗತಿಯಲ್ಲಿ ಜ್ಞಾನದ ನಿರ್ಮಾಣ

ಈ ಚರ್ಚೆಯ ಹಿನ್ನಲೆಯಲ್ಲಿ ಗುಣಾತ್ಮಕ ಶಿಕ್ಷಣ ಕುರಿತು ಚಿಂತಿಸೋಣ. ಈ ತರಗತಿ ಶಿಶುಕೇಂದ್ರಿತ ತರಗತಿಯಾಗಿತ್ತು; ಅಧ್ಯಾಪಕ ಮಕ್ಕಳನ್ನು ಪ್ರೀತಿಯಿಂದ ಕಾಣುತ್ತಿದ್ದ; ಅವರಿಗೆ ಪ್ರಶ್ನೆ ಕೇಳುವ ಉತ್ತರ ಹೇಳುವ ಮುಕ್ತ ವಾತಾವರಣವನ್ನೂ ಕಲ್ಪಿಸಿದ್ದ, ಶಾಲೆಯಲ್ಲಿ ಸಾಕಷ್ಟು ಸಂಪನ್ಮೂಲವಿತ್ತು. ಈ ಎಲ್ಲವೂ ಮಕ್ಕಳ ಆತ್ಮವಿಶ್ವಾಸವನ್ನು ಹೆಚ್ಚಿಸಿದ್ದವು. ಈ ಮಕ್ಕಳು ಸಾಮಾಜಿಕವಾಗಿ ಆರ್ಥಿಕವಾಗಿ ಹಿಂದುಳಿದ ವರ್ಗದಿಂದ ಬಂದಿದ್ದರೂ ಶ್ರೇಷ್ಠವ್ಯಕ್ತಿ ಚಿತ್ರವನ್ನು ಪಡೆಯಲು ಸಾಧ್ಯವಾಗಿತ್ತು. ಇಷ್ಟೆಲ್ಲಾ ಇದ್ದರೂ ಮಕ್ಕಳ ಕಲಿಕೆಯಲ್ಲಿ ಎದ್ದುಕಾಣುವ ಕೊರತೆ ನಿರಾಶೆಯುಂಟು ಮಾಡುತ್ತಿತ್ತು. ಈ ಕೊರತೆಯನ್ನು ಇವರಿಗೆ ಪಾಠ ಹೇಳುವ ಶಿಕ್ಷಕ ಏಕೆ ಗುರುತಿಸಲಿಲ್ಲ? ಹೊರಗಿನಿಂದ ಬಂದವರು – ಶಿಕ್ಷಣತಜ್ಞರಲ್ಲದೆ ಇದ್ದರೂ ಕೂಡ ಈ ಕೊರತೆಯನ್ನು ಗುರುತಿಸಬಲ್ಲರು. ವೃತ್ತಿಪರನಾದ ಶಿಕ್ಷಕನಿಗೆ ಈ ಕೊರತೆ ಕಾಣುವುದಿಲ್ಲ! ಹೀಗೇಕೆ? ಚದುರಂಗದ ಆಟ ಆಡುವವನಿಗಿಂತ ಅದನ್ನು ನೋಡುವವನಿಗೆ ಮುಂದಿನ ಜಾಣ ನಡಿಗೆಗಳು ಕಾಣತೊಡಗುತ್ತವೆ. ಬಹುಶಃ ಇದೂ ಹೀಗೆ ಇರಬಹುದು. ಅನುದಿನವೂ ಅಧ್ಯಾಪಕರು ಪಾಠ ಮಾಡುತ್ತ ಮಾಡುತ್ತ 'ಪುಸ್ತಕ–ಪಾಠ–ಪರೀಕ್ಷೆ' ಇವಿಷ್ಟನ್ನು ಬಿಟ್ಟು ಬೇರೇನನ್ನೂ ನೋಡಲಾರದವರಾಗಿಬಿಡುತ್ತಾರೆ. 'ಕಂಡೀಷನಿಂಗ್' ಅಥವಾ ಒಂದು ಬಗೆಯ ಯಾಂತ್ರಿಕ ಮನೋಧರ್ಮಕ್ಕೆ ಶರಣಾಗಿ ಬಿಡುತ್ತಾರೆ.

ಇಂತಹ ಒಂದು ಯಾಂತ್ರಿಕತೆಯಿಂದ ಅಧ್ಯಾಪಕರನ್ನು ಪಾರು ಮಾಡಲು ಸಾಮಾನ್ಯವಾಗಿ ನಾವು ಬಳಸುವ ಪರಿಹಾರ ಎಂದರೆ 'ತರಬೇತಿ'. ಸರ್ಕಾರದಂತಹ ಒಂದು ಬೃಹತ್ ವ್ಯವಸ್ಥೆಯಲ್ಲಿ ನೀಡುವ ತರಬೇತಿಗಳು ನಾವು ಈ ಸಂದರ್ಭದಲ್ಲಿ ಬಯಸುತ್ತಿರುವ ಸೂಕ್ಷ್ಮತೆಗಳನ್ನು ಅಧ್ಯಾಪಕರಿಗೆ ಕೊಡಬಲ್ಲುವೆ ಎಂಬುದು ಒಂದು ಯಕ್ಷ ಪ್ರಶ್ನೆ. ಅಧ್ಯಾಪಕನಿಗೆ ಈಗಾಗಲೇ ಪ್ರಾಪ್ತವಾಗಿರುವ ಯಾಂತ್ರಿಕ ಮನೋಧರ್ಮವನ್ನು ಮತ್ತಷ್ಟು ಗಟ್ಟಿಗೊಳಿಸದೆ ಇದ್ದರೆ ಅದೇ ನಮ್ಮ ಪುಣ್ಯ. ಆದರೆ ನಮ್ಮ ವ್ಯವಸ್ಥೆಯ ತರಬೇತಿಗಳು ಸೃಜನಶೀಲ ಅಧ್ಯಾಪಕನ ಸೃಜನಶೀಲತೆಯನ್ನು ಕಸಿದುಕೊಂಡು ಆ ಸ್ಥಳದಲ್ಲಿ ಯಾಂತ್ರಿಕ ಮನೋಧರ್ಮವನ್ನು ತುಂಬಿಬಿಡುತ್ತವೆ. ಮೊದಲನೆಯದಾಗಿ ನೂರಾರು ಅಧ್ಯಾಪಕರನ್ನು ಒಟ್ಟಿಗೆ ಕೂರಿಸಿಕೊಂಡು ತರಬೇತಿ ನೀಡುತ್ತಾರೆ. ಇಂತಹ ತರಬೇತಿಗಳಲ್ಲಿ ಸರಾಸರಿಯಾಗಿ ಎಲ್ಲರಿಗೂ ಅವರವರ ತರಗತಿಯ ಸಂದರ್ಭಗಳಲ್ಲಿ ಕೆಲಸಕ್ಕೆ ಒದಗಿ ಬರುವ ಉಪಯುಕ್ತ ಮಾಹಿತಿ ಸಲಹೆಗಳನ್ನು ಕೊಡಲು ಮಾತ್ರ ಸಾಧ್ಯ. ಈ ತರಬೇತಿಗಳ ವ್ಯವಸ್ಥಾತ್ಮಕ ರಚನೆಯೇ ಅವುಗಳ ಪರಿಮಿತಿಗಳನ್ನು ಅಂಗೈಮೇಲಿನ ನೆಲ್ಲಿಕಾಯಿಯಷ್ಟು ಸ್ಪಷ್ಟವಾಗಿ ಬಿಂಬಿಸುತ್ತದೆ ಎಂದ ಮೇಲೆ ಈ ತರಬೇತಿಗಳ ಉದ್ದೇಶವೇನು, ನಿರೀಕ್ಷಿತ ಫಲವೇನು?

ಯಾವುದೇ ವ್ಯಕ್ತಿಯಲ್ಲಿ ಸೂಕ್ಷ್ಮ ಸಂವೇದನೆಗಳು ಮೂಡಬೇಕಾದರೆ ವ್ಯಕ್ತಿ ವ್ಯಕ್ತಿಗಳ ನಡುವೆ ಆತ್ಮೀಯ ಸಂವಹನ-ಸಂವಾದ ಸಾಧ್ಯವಾಗಬೇಕು. ಇಂತಹ ಆತ್ಮೀಯ ಸಂವಹನ ಒಬ್ಬ ಮನುಷ್ಯ ನೂರಾರು ಜನರನ್ನು ಕುರಿತು ಮಾತನಾಡಿದಾಗ ಉಂಟಾಗುವುದಿಲ್ಲ. ಒಬ್ಬ ಅದ್ಭುತ ಮಾತುಗಾರನ ಮಾತು ಕೇಳಿ ನಾವು ಪ್ರಭಾವಿತರಾದರೂ ಅಂತಹ ವ್ಯಕ್ತಿಯನ್ನು ಮತ್ತೆ ಏಕಾಂತದಲ್ಲಿ ಮಾತನಾಡಿಸಲು ಇಚ್ಛಿಸುತ್ತೇವೆ. ಆಗ ಮಾತ್ರ ನಿಜವಾದ ಸಂವಹನ ಸಾಧ್ಯವಾಗುತ್ತದೆ. ಈ ಸಂವಹನ ಸಂವೇದನೆಗಳಾಗಿ ನಮ್ಮೊಳಗೆ ನಮ್ಮದೇ ಭಾಗವಾಗಿ ಸ್ಥಿರಗೊಳ್ಳುತ್ತದೆ.

ಈ ಬಗೆಯ ಸೂಕ್ಷ್ಮ ಸಂವೇದನೆಗಳನ್ನು ನಾವು ನಮ್ಮ ಈ ಬೆಳಕಿನ ಪಾಠದ ಅಧ್ಯಾಪಕನಲ್ಲಿ ಮೂಡಿಸಬೇಕಾದರೆ ಏನು ಮಾಡಬೇಕು? ಇದು ಒಂದು ದಿನದ ಕೆಲಸವಲ್ಲ. ನಾವು ಬಯಸುವ ಈ ಸೂಕ್ಷ್ಮತೆ ನಮಗೇ ಹೇಗೆ ಮೂಡಿತು ಎಂಬುದನ್ನು ಕುರಿತು ನಾವು ಆಲೋಚಿಸಬೇಕು. ಜೊತೆಗೆ ಈ ಸೂಕ್ಷ್ಮತೆ ರೂಪುಗೊಳ್ಳುವಾಗ ನಮ್ಮ ಅರಿವಿನ ಪರಿಧಿ ವಿಸ್ತಾರಗೊಂಡ ಬಗೆಯನ್ನು ನಾವು ಗಮನಿಸಬೇಕು. ಒಂದು ವಿಷಯದ ಬಗ್ಗೆ ಪಡೆದ ಆಳವಾದ ಅರಿವಿನಿಂದ ಮಾತ್ರ ಆ ಸಂಬಂಧವಾದ ಸೂಕ್ಷ್ಮತೆಗಳನ್ನೂ ಪಡೆಯಲು ಸಾಧ್ಯ. ಈ ಸಂದರ್ಭದಲ್ಲಿ ಆ ಅರಿವು ಯಾವುದು ಎಂದು ಪರಿಶೀಲಿಸೋಣ.

ಮಾಹಿತಿ ಗೊಬ್ಬರ : ಮಕ್ಕಳು ಬೀಜ. ಈ ಅಧ್ಯಾಪಕ ಪಾರದರ್ಶಕ-ಅಪಾರದರ್ಶಕ ವಸ್ತುಗಳ ಸಂದರ್ಭದಲ್ಲಿ ಅತ್ಯುತ್ತಮ ಮಾಹಿತಿಯನ್ನು ಮಕ್ಕಳಿಗೆ ನೀಡಿದ್ದು ಸ್ಪಷ್ಟವಾಗೇ ಇದೆ. ಮಕ್ಕಳು ಈ ಬಗ್ಗೆ ದೊಡ್ಡ ಪಟ್ಟಿಯನ್ನೇ ತಯಾರಿಸಿಕೊಂಡಿದ್ದರು. ಜೊತೆಗೆ ಆತ್ಮವಿಶ್ವಾಸದಿಂದ ಅದನ್ನೇ ಹೇಳುತ್ತಿದ್ದರು. ಇಲ್ಲಿ ಒಂದು ಮುಖ್ಯ ಪ್ರಶ್ನೆ ಇದೆ. ಶಾಲಾ ಕಲಿಕೆ ಎಂದರೆ ಈ ರೀತಿ ಮಾಹಿತಿಯನ್ನು ಮಾತ್ರ ಸಂಗ್ರಹಿಸುವುದೆ? ಬರಿ ಮಾಹಿತಿಗೆ ಜೀವ ಇರುವುದಿಲ್ಲ. ಅದು ಒಂದು ಶವಕ್ಕೆ ಸಮಾನ ಎಂದು ವಾಚ್ಯವಾಗಿ ನಾವು ಹೇಳಬಹುದು. ಮಾಹಿತಿ ಎಂಬುದು ಗತಕಾಲದ, ಸ್ಮಶಾನದ ಗೋರಿಗಳಲ್ಲಿ ಹುದುಗಿಹೋಗಿರುವ ಚಲನಶೀಲತೆಯನ್ನು ಕಳೆದುಕೊಂಡ ಸ್ಥಾವರರೂಪ. ಈ ಸಮಾಧಿಗಳ ಮೇಲೆ ಹುಟ್ಟುವ ಒಂದೇ ಒಂದು ಹುಲ್ಲಿನ ಎಸಳು ಕೂಡ ಸ್ಮಶಾನದ ಗರ್ಭದಲ್ಲಿ ಅಡಗಿಹೋಗಿರುವ ಅಸಂಖ್ಯಾತ ಶವಗಳಿಗಿಂತ ಶ್ರೇಷ್ಠ. ಇದು ಎಲ್ಲರೂ ಒಪ್ಪುವ ವಿಷಯ.

ಹೀಗೆ ಮಾಹಿತಿ ಎಂಬುದು ಒಂದು ಸತ್ತ ಸಂಗತಿ, ನಿಂತು ಹೋಗಿರುವ ಚಕ್ರ ಎಂಬ ಅರಿವು ಎಲ್ಲಿಯವರೆಗೆ ನಮಗೆ ಸಾಧ್ಯವಾಗುವುದಿಲ್ಲವೊ ಅಲ್ಲಿಯವರೆಗೆ ವರ್ತಮಾನದ ಚಲನಶೀಲತೆಯೂ ಸಾಧ್ಯವಾಗುವುದಿಲ್ಲ, ಸೃಷ್ಟಿ ಸಾಧ್ಯವಾಗುವುದಿಲ್ಲ. ಯಾವುದನ್ನು ನಾವು ಜ್ಞಾನ ಎನ್ನುತ್ತೇವೆಯೋ ಅದು ಮೊಳೆಯುವ ಬೀಜದಂತೆ. ಹೊಸ ವಿಸ್ತಾರದೆಡೆಗೆ ವಿಕಸಿಸುವ ಶಕ್ತಿ ಅದಕ್ಕಿದೆ. ಈ ಬೀಜಕ್ಕೆ ಶಕ್ತಿ ನೀಡುವ ಗೊಬ್ಬರ ಎಷ್ಟೇ ಶ್ರೇಷ್ಠವಾದರೂ ಅದು ಗೊಬ್ಬರವೆ. ಬೀಜಕ್ಕೆ ಇರುವ ಶಕ್ತಿ ಗೊಬ್ಬರಕ್ಕೆ ಇರುವುದಿಲ್ಲ.

ಮಾಹಿತಿಯೂ ಹೀಗೆ ಗೊಬ್ಬರಕ್ಕೆ ಸಮ. ಆದರೆ ಇಂದಿನ ಶಿಕ್ಷಣ ಬೀಜಕ್ಕಿಂತ ಗೊಬ್ಬರಕ್ಕೆ ಪ್ರಾಧ್ಯಾನ್ಯ ನೀಡುತ್ತಿದೆ. ಗೊಬ್ಬರವೇ ಸರ್ವಶ್ರೇಷ್ಠವೆಂಬಂತೆ ವರ್ತಿಸುತ್ತಿದೆ. ಶಿಕ್ಷಣದ ಚರಮಗುರಿ ಮಾಹಿತಿ ಸಂಗ್ರಹಿಸುವುದು ಎನ್ನುವಂತಿದೆ. ಈ ತಪ್ಪುಕಲ್ಪನೆ ಬದಲಾಗುವವರೆಗೆ ಶಿಕ್ಷಣದಲ್ಲಿ ನಿಜವಾದ ಕ್ರಾಂತಿ ಅಸಾಧ್ಯ.

ಅನ್ವಯಿಕ ಜ್ಞಾನ

ಮಾಹಿತಿಯ ಪರಿಮಿತಿಗಳನ್ನು ಅರಿತ ಮೇಲೆ ಮಗುವಿನ ಮನಸ್ಸಿನಲ್ಲಿ ಜ್ಞಾನನಿರ್ಮಾಣ ಹೇಗೆ ಆಗುತ್ತದೆ ಎಂಬುದನ್ನು ಅರಿಯಲು ಪ್ರಯತ್ನಿಸೋಣ. ತರಗತಿಗಳಲ್ಲಿ ಸಂಗ್ರಹಿಸಿದ ಮಾಹಿತಿಯೊಡನೆ ಮಗು ಈಗಾಗಲೇ ಗಳಿಸಿರುವ ಅರಿವಿನ ಆಧಾರದ ಮೇಲೆ ಹೊಸ ಜ್ಞಾನವನ್ನು ತನಗೆ ತಾನೇ ಅರ್ಥೈಸಿಕೊಳ್ಳುತ್ತದೆ. ಹೀಗೆ ಮಾಹಿತಿಯ ಆಧಾರದ ಮೇಲೆ ಹೊಸ ಒಳನೋಟಗಳನ್ನು ಪಡೆಯುತ್ತ ಹೊಸ ಆಯಾಮಕ್ಕೆ ಕಾಲಿಡುವುದೆ ಜ್ಞಾನ ನಿರ್ಮಾಣ. ಹೀಗೆ ಹುಟ್ಟಿದ ಜ್ಞಾನ ಜೀವನದ ನಿಜ ಪ್ರಸಂಗಗಳಲ್ಲಿ ಪ್ರಯೋಜನಕ್ಕೆ ಬರುವಂತೆ ಮಗು ಅನ್ವಯಿಸಿ ಬಳಸಲು ಸಾಧ್ಯವಾದರೆ ಅದು ಅನ್ವಯಿಕ ಜ್ಞಾನವಾಗುತ್ತದೆ. ಹೀಗೆ ಮಗು ತಾನು ಪಡೆದ ಜ್ಞಾನವನ್ನು ಪದೇ ಪದೇ ಯಶಸ್ವಿಯಾಗಿ ಬಳಸಿದರೆ ತನ್ನ ಅರಿವಿನ ಬಗ್ಗೆ ಆತ್ಮವಿಶ್ವಾಸವನ್ನೂ ಪಡೆಯುತ್ತದೆ. ಒಂದು ವೇಳೆ ತಾನು ಕಲಿತದ್ದನ್ನು – ಅರಿತದ್ದನ್ನು ನಿಜಜೀವನ ಪ್ರಸಂಗಗಳಲ್ಲಿ ಉಪಯೋಗಿಸಲು ಪ್ರಯತ್ನಿಸಿ ವಿಫಲವಾದರೆ ಆಗ ಇಡೀ ಕಲಿಕೆಯನ್ನು ಮಗು ನಿಜ ಜೀವನದಿಂದ ವಿಭಾಗಿಸಿ, ಬದುಕಲು ಬೇಕಾದ ಜ್ಞಾನವನ್ನು ಹೊರಗೆಲ್ಲೋ ಪಡೆದುಕೊಳ್ಳುತ್ತ ಪರೀಕ್ಷೆ ಬರೆಯಲು ಬೇಕಾದ ಜ್ಞಾನವನ್ನು ಮಾತ್ರ ತರಗತಿಗಳಿಂದ ಪಡೆಯಬೇಕೆಂದು ನಿರ್ಧರಿಸುತ್ತದೆ. ಕಲಿಕೆ ಎಂಬುದು ಕೇವಲ ಮಾಹಿತಿಯಾದರೆ ಅದು ಅನ್ವಯಿಕ ಜ್ಞಾನವಾಗುವುದು ಸಾಧ್ಯವಿಲ್ಲ. ನಮ್ಮ ಪರೀಕ್ಷೆಗಳು ಮಗು ಮಾಹಿತಿಯನ್ನು ಸಂಗ್ರಹಿಸಿದೆಯೆ ಎಂಬುದನ್ನು ಮಾತ್ರ ಪರೀಕ್ಷಿಸಬಲ್ಲುವು. ಮಗು ನಿಜವಾದ ಜ್ಞಾನವನ್ನು ಸಂಪಾದಿಸಿದೆಯೆ ಎಂದು ಪರೀಕ್ಷಿಸುವುದು ಕಷ್ಟಸಾಧ್ಯ. ಇಡೀ ಭಾರತದ ಉದ್ದಗಲಕ್ಕೂ ನಮಗೆ ಕಂಡು ಬರುವ ಚಿತ್ರ ಇದೇ. ಜನರು ತಾವು ಶಾಲಾ ತರಗತಿಗಳಲ್ಲಿ ಕಲಿತದ್ದನ್ನು ಎಂದೂ ತಮ್ಮ ನಿಜಜೀವನದ ಪ್ರಸಂಗದಲ್ಲಿ ಉಪಯೋಗಿಸುವುದೇ ಇಲ್ಲ. ಶಾಲಾ ಕಲಿಕೆ ಸರ್ಟಿಫಿಕೇಟ್‌ಗಾಗಿ; ಸರ್ಟಿಫಿಕೇಟ್ ಕೆಲಸ ಪಡೆಯಲು; ಅನಂತರ ಕೆಲಸವನ್ನು ಸಂಬಳಕ್ಕೆ ಸಂಚಕಾರ ಬರದಷ್ಟರ ಮಟ್ಟಿಗೆ ಮಾಡುವುದೇ ಜೀವನವಾಗುತ್ತದೆ.

ಕೆಲಸ ಎಂದಾಗ ಕೆಲಸಗಳ್ಳತನವೇ ದೊಡ್ಡ ಸಾಧನೆ ಎಂದು ಭಾವಿಸುವ ನಮ್ಮ ಜನಕ್ಕೆ ಹಣದ ಹೊರತಾಗಿ ಸಾಧಿಸಬಹುದಾದ ಗುರಿ ಈ ಪ್ರಪಂಚದಲ್ಲಿ ಇಲ್ಲವೇ ಇಲ್ಲ. ಈ ನಿರ್ಧಾರಕ್ಕೆ ನಮ್ಮ ಜನಸಮೂಹ ಬರಲು ನಮ್ಮ ಶಾಲಾ ಶಿಕ್ಷಣವೇ ಕಾರಣ ಎನ್ನಬಹುದು. ಏಕೆಂದರೆ ಶಾಲಾ ಶಿಕ್ಷಣದುದ್ದಕ್ಕೂ ಮಕ್ಕಳು ಸುಲಭವಾಗಿ ಅಂಕ ಗಳಿಸುವ

ವಿಧಾನವನ್ನು ಬಹಳ ಶ್ರದ್ಧೆಯಿಂದ ಕಲಿತಿರುತ್ತಾರೆ! ಮನುಷ್ಯ ಸಾಧಿಸಬಹುದಾದ ಇತರ ಯಾವುದೇ ಗುರಿಗಳನ್ನೂ ನಮ್ಮ ಶಿಕ್ಷಣ ಮಕ್ಕಳ ಮುಂದೆ ತೆರೆದಿಡುವುದಿಲ್ಲ.

ಮಕ್ಕಳ ಮನಸ್ಸಿನಲ್ಲಿ ಜ್ಞಾನದ ಸವಿ ಹುಟ್ಟುವಂತೆ, ಒಂದು ಸದಭಿರುಚಿ ಮೂಡುವಂತೆ ಮಾಡುವಲ್ಲಿ ನಮ್ಮ ಶಾಲಾ ಶಿಕ್ಷಣ ವಿಫಲವಾಗಿದೆ. ಮಕ್ಕಳ ಮನಸ್ಸಿನಲ್ಲಿ ಜ್ಞಾನ ಹೇಗೆ ನಿರ್ಮಾಣವಾಗುತ್ತದೆ ಎಂಬುದನ್ನು ನಾವು ಸರಿಯಾಗಿ ತಿಳಿದುಕೊಂಡಿಲ್ಲ. ಮಗು ಸಂಪಾದಿಸಿದ ಜ್ಞಾನ ವಸ್ತುನಿಷ್ಠವಾಗಿದ್ದರೆ, ಸಮಗ್ರವಾಗಿದ್ದರೆ ಅದನ್ನು ನಿಜಜೀವನ ಪ್ರಸಂಗದಲ್ಲಿ ಉಪಯುಕ್ತವಾಗಿ ಬಳಸಲು ಸಾಧ್ಯವಾಗುತ್ತಿತ್ತು. ಇಂತಹ ಜ್ಞಾನ ಅನುಭವದ ಭಾಗವಾಗಿ ಅನಂತರ ವ್ಯಕ್ತಿತ್ವದ ಭಾಗವಾಗಿ, ಮಗುವಿನ ಮನಸ್ಸಿನಲ್ಲಿ ನೆಲೆ ನಿಲ್ಲುತ್ತಿತ್ತು. ನಮ್ಮ ಪಠ್ಯಪುಸ್ತಕಗಳ, ಸಿಲಬಸ್‌ಗಳ ಆಧಾರದ ಮೇಲೆ ಅಸಮರ್ಥ ಅಧ್ಯಾಪಕರು ನೀಡುವ ಮಾಹಿತಿಯಿಂದ ಮಗು ಪರಿಪೂರ್ಣ ಜ್ಞಾನವನ್ನು ಸಂಶ್ಲೇಷಿಸಲು ಸಾಧ್ಯವಿಲ್ಲ. ಏಕೆಂದರೆ ಶಾಲಾ ಪಠ್ಯದ ಮೂಲಕ ನೀಡುವ ಮಾಹಿತಿ ಒಂದು ವಿಷಯದ ಸಮಗ್ರರೂಪವಾಗಿರುವುದಿಲ್ಲ. ಒಂದು ವಿದ್ಯಮಾನದ ಆಯ್ದ ಭಾಗಗಳನ್ನು (ಉತ್ತರ ನೀಡಲು ಅತಿ ಮುಖ್ಯ ಎನಿಸುವಂಥವನ್ನು) ಮಾತ್ರ ನಮ್ಮ ಶಾಲಾ ಶಿಕ್ಷಣ ನೀಡುತ್ತದೆ. ಇದು ಹೇಗೆಂದರೆ ಒಂದು ಉದ್ಯಾನವನದಲ್ಲಿ ಮಾಲಿಯೊಬ್ಬ ಗಿಡಗಳನ್ನು ಕತ್ತರಿಸಿ ವಿವಿಧ ಆಕೃತಿಗಳಾಗಿ ಮಾಡಿರುವಂತೆ. ಹೀಗೆ ಕಟಿಂಗ್ ಮಾಡಿದ ಆಕೃತಿಗಳು ಈ ಗಿಡಗಳ ನೈಜ ರೂಪವಲ್ಲ. ಶಾಲಾ ಶಿಕ್ಷಣ ಕೊಡುವ ಜ್ಞಾನದ ರೂಪವು ಹೀಗೆ. ಈ ಕೃತಕ ಆಕೃತಿಗಳನ್ನು ನೋಡಿ ನಮ್ಮ ಮಕ್ಕಳು ಈ ಗಿಡಗಳ ನೈಜ ರೂಪವನ್ನು ಊಹಿಸಬೇಕು. ಹೀಗೆ ತುಂಡರಿಸಿದ, ಸಂಬಂಧ ಕಳೆದುಕೊಂಡ ಮಾಹಿತಿಯ ತುಣುಕುಗಳು ಸೇರಿಕೊಂಡು ಪರಿಪೂರ್ಣ ಜ್ಞಾನ ಉಂಟಾಗುವುದಾದರೂ ಹೇಗೆ? ಅಧ್ಯಾಪಕರು ನಿಯಮಿತ ಕಾಲದಲ್ಲಿ ಎಲ್ಲ ಪಾಠಗಳನ್ನು ಮುಗಿಸಬೇಕು. ಪರೀಕ್ಷೆಗಳನ್ನು ಮಾಡಬೇಕು, ಹೀಗೆ ಹತ್ತು ಹಲವು ಕಾರಣಗಳಿಗೆ ಒಂದೇ ವಿಷಯ ಕುರಿತು ಆಳ ಅಧ್ಯಯನ ಸಾಧ್ಯವಾಗುವುದಿಲ್ಲ. ನಮ್ಮ ಶಿಕ್ಷಣ ವ್ಯವಸ್ಥೆ ಹಾಗೂ ಅಧ್ಯಾಪಕರು ಅರಿಯಬೇಕಾದ ಬಹುಮುಖ್ಯ ಸಂಗತಿ ಎಂದರೆ ಮಕ್ಕಳು ಬಹಳಷ್ಟು ವಿಷಯಗಳನ್ನು ಅಸಮರ್ಪಕವಾಗಿ ಕಲಿಯುವುದಕ್ಕಿಂತ ಒಂದು ವಿಷಯವನ್ನು ಆಳವಾಗಿ ಕಲಿಯುವುದು ಹೆಚ್ಚು ಉಪಯುಕ್ತ.

ಶಿಕ್ಷಣದಲ್ಲಿ ಅಗಲಕ್ಕಿಂತ ಆಳ ಮುಖ್ಯ

ಪಾರದರ್ಶಕ–ಅಪಾರದರ್ಶಕ ಪಾಠಗಳಲ್ಲಿ ಆ ಅಧ್ಯಾಪಕ ಅವಸರ ಅವಸರವಾಗಿ ಮುಂದಿನ ಪಾಠಕ್ಕೆ ದಾಪುಗಾಲು ಇಡುವ ಬದಲು ಆ ವಿಷಯವನ್ನೇ ಆಳಕ್ಕೆ, ಮತ್ತಷ್ಟು ಆಳಕ್ಕೆ ತೆಗೆದುಕೊಂಡು ಹೋಗಬಹುದಿತ್ತು. ಒಂದು ವಿಷಯಕ್ಕೆ ಸಂಬಂಧಪಡುವ ಎಲ್ಲ ಅಂಶಗಳನ್ನು ಚಟುವಟಿಕೆಗಳ ಮೂಲಕ ಅರ್ಥಮಾಡಿಕೊಳ್ಳುವ ಪ್ರಯತ್ನ ಮಾಡಬಹುದಿತ್ತು. ಹೀಗೆ ಉಂಟಾದ ಅನುಭವ ಕುರಿತಾಗಿ ಧ್ಯಾನಸ್ಥರಾಗಬಹುದಾಗಿತ್ತು. ಬಹಳ ಮುಖ್ಯವಾದ

ವಿಷಯವೇನೆಂದರೆ ಕೇವಲ ಪುಸ್ತಕವನ್ನಾಧರಿಸಿ ಪಾಠ ಮಾಡುವ ಬದಲು ಒಂದು ವಿಷಯವನ್ನು ಮಕ್ಕಳು ಹೇಗೆ ಅರಿಯುತ್ತಾರೆ, ಈ ಅರಿವಿನ ಪರಿಣಾಮವೇನು ಎಂಬುದನ್ನು ಕುರಿತು ಅಧ್ಯಾಪಕ ಆಗಾಗ ಧ್ಯಾನಿಸಬಹುದಾಗಿತ್ತು. ಈ ಸಾಮರ್ಥ್ಯದ ಕೊರತೆಯನ್ನು ತುಂಬಬಹುದಾದ ಏಕಮಾತ್ರ ಅಂಶ ಎಂದರೆ 'ಪ್ರೀತಿ'. ಮಕ್ಕಳನ್ನು ಗಾಢವಾಗಿ ಪ್ರೀತಿಸುವ ಅಧ್ಯಾಪಕನಿಗೆ ಈ ಎಲ್ಲವೂ ತಾನೇ ತಾನಾಗಿ ಸಾಧ್ಯವಾಗಿಬಿಡುತ್ತದೆ. ಇಂತಹ ಅಧ್ಯಾಪಕ ಸದಾ ಉತ್ಸಾಹಿಯಾಗಿರುತ್ತಾನೆ. ತನ್ನ ನ್ಯೂನತೆಗಳನ್ನು ಯಾರೇ ಗುರುತಿಸಿ ಹೇಳಲಿ, ಚಿಕ್ಕವರು ದೊಡ್ಡವರು ಎಂಬ ಭೇದವಿಲ್ಲದೆ 'ಮಕ್ಕಳಿಗೆ ಒಳಿತಾಗುತ್ತದೆ' ಎಂಬ ಒಂದು ಅಂಶವನ್ನು ಮಾತ್ರ ಗುರುತಿಸಿ ತನ್ನನ್ನೇ ತಾನು ಬದಲಿಸಿಕೊಳ್ಳಲು ಉತ್ಸುಕನಾಗಿರುತ್ತಾನೆ. ಇಂತಹ ಅಧ್ಯಾಪಕನ ಅಭಿರುಚಿಗಳು ಶ್ರೇಷ್ಠವಾಗಿರುತ್ತವೆ ಮತ್ತು ಅವನು ಇದನ್ನೇ ಮಕ್ಕಳಿಗೆ ಕೊಡುತ್ತಾನೆ. ಇಂತಹ ಅಧ್ಯಾಪಕನಲ್ಲಿ ಅಧ್ಯಯನಶೀಲತೆ ಎದ್ದುಕಾಣುತ್ತದೆ. ಒಂದು ವಿಷಯದ ತಲಸ್ಪರ್ಶಿ ಅಧ್ಯಯನ ಇವನಿಗೆ ಸಾಧ್ಯ. ಇಂತಹ ಅಧ್ಯಯನದಿಂದ ಆ ವಿಷಯದ ಬಗ್ಗೆ ನಮಗೆ ಗೊತ್ತಿರುವುದಕ್ಕಿಂತ ಗೊತ್ತಿಲ್ಲದೇ ಇರುವುದೇ ಹೆಚ್ಚು ಎಂಬ ಅರಿವು ಉಂಟಾಗುತ್ತದೆ. ಈ ಅರಿವು ಮನುಷ್ಯನನ್ನು ಅಹಂಕಾರಶೂನ್ಯನನ್ನಾಗಿ ಮಾಡುತ್ತದೆ. ಈ ನಿರಂಹಕಾರಿ ಮನೋಭಾವ ಮತ್ತೊಬ್ಬರೊಡನೆ ಮುಕ್ತ ಸಂವಹನವನ್ನು ಸಾಧ್ಯವಾಗಿಸುತ್ತದೆ, ಮಗುವಿನೊಡನೆ ಕೂಡ. ಐನ್‌ಸ್ಟೈನ್ ಅವರನ್ನು ನೆರೆಮನೆಯ ಒಬ್ಬ ಪುಟ್ಟಬಾಲಕಿ ಲೆಕ್ಕ ಹೇಳಿಕೊಡುವಂತೆ ಕೇಳುತ್ತಾಳೆ. ಐನ್‌ಸ್ಟೈನ್ ಸಹಜವಾಗಿ ಅವಳಿಗೆ ಲೆಕ್ಕ ಹೇಳಿಕೊಡುತ್ತಿರುತ್ತಾರೆ. ಬಾಲಕಿಯ ತಾಯಿ ವಿಷಯ ತಿಳಿದು ದೊಡ್ಡ ಪ್ರಮಾದವಾಯಿತೇನೋ ಎಂಬಂತೆ ಓಡಿಬಂದು ಐನ್‌ಸ್ಟೈನ್ ಅವರನ್ನು ತಮ್ಮ ಮಗಳು ತೊಂದರೆ ಕೊಟ್ಟಿದ್ದಕ್ಕೆ ಕ್ಷಮೆ ಯಾಚಿಸುತ್ತಾರೆ. ಮಗಳನ್ನು ಹಿಂದಕ್ಕೆ ಬರುವಂತೆ ಕರೆಯುತ್ತಾಳೆ. ಆದರೆ ಐನ್‌ಸ್ಟೈನ್ ಅವರು ನಗುತ್ತ 'ತಪ್ಪೇನಿದೆ? ಈ ಮಗುವಿಗೆ ಲೆಕ್ಕ ಹೇಳಿಕೊಟ್ಟಿದ್ದರಿಂದ ನನಗೇನು ತೊಂದರೆ ಆಗಲಿಲ್ಲ' ಎನ್ನುತ್ತಾರೆ.

ಗುಣಾತ್ಮಕ ಶಿಕ್ಷಣ ಮತ್ತು ನಮ್ಮ ಸರ್ಕಾರಿ ವ್ಯವಸ್ಥೆ

ಭಾರತ ಪ್ರಪಂಚದಲ್ಲೇ ಅತ್ಯಂತ ಹೆಚ್ಚು ಸಂಖ್ಯೆಯ ಮಕ್ಕಳನ್ನು ಹೊಂದಿರುವ ದೇಶ. ನಮ್ಮ ಜನಸಂಖ್ಯೆಯ ಶೇಕಡ ನಲವತ್ತು ಭಾಗ ಮಕ್ಕಳು. ಇಷ್ಟು ದೊಡ್ಡ ಸಂಖ್ಯೆಯ ಮಕ್ಕಳನ್ನು ಮುಂದಿನ ಭವ್ಯ ಭಾರತದ ಪ್ರಜೆಗಳನ್ನಾಗಿ ಮಾಡಲು ನಾವು ಪ್ರತಿ ವರ್ಷ ಮೀಸಲಿಡುತ್ತಿರುವ ಹಣ ಮಾತ್ರ ಶೇಕಡ ನಾಲ್ಕರಿಂದ ಆರು ಭಾಗ ಮಾತ್ರ. ರಾಷ್ಟ್ರೀಯವಾಗಿ ನಾವು ಮಕ್ಕಳನ್ನು ಎಷ್ಟು ಗಂಭೀರವಾಗಿ ಪರಿಗಣಿಸುತ್ತೇವೆ ಎಂದು ಗುರುತಿಸಲು ಈ ಆರ್ಥಿಕ ನೀತಿಯೇ ಸಾಕು.

ಇದೇ ನೀತಿಯ ಭಾಗವಾಗಿ ಕೆಲಸ ಮಾಡುವ ನಮ್ಮ ಶಿಕ್ಷಣ ಇಲಾಖೆಯು ಮಕ್ಕಳ ಗುಣಮಟ್ಟದ ಕಲಿಕೆಗಿಂತ ಆಡಳಿತಾತ್ಮಕ ವಿಷಯಗಳಿಗೇ ಹೆಚ್ಚು ಆದ್ಯತೆ ಕೊಡುತ್ತದೆ.

ಹೀಗೆ ಮೀಸಲಿರಿಸಿದ ಶೇಕಡ ನಾಲ್ಕ ರಿಂದ ಆರು ಭಾಗ ಹಣದ ಬಹುಭಾಗವೂ ಸಂಬಳ ಸಾರಿಗೆಗೆಂದು ವ್ಯಯವಾಗಿ ಮಕ್ಕಳಿಗಾಗಿ ನಾವು ನೇರವಾಗಿ ಖರ್ಚು ಮಾಡುವುದು ಅತ್ಯಲ್ಪ. ವ್ಯವಸ್ಥೆಯ ಈ ವಿರೋಧಾಭಾಸಗಳ ನಡುವೆ ಒತ್ತಡಕ್ಕೆ ಮಣಿದ ಸರ್ಕಾರ ಗುಣಾತ್ಮಕ ಶಿಕ್ಷಣದ ಬಗ್ಗೆ ಆಗಾಗ ಮಾತನಾಡುತ್ತದೆ. ಗುಣಾತ್ಮಕ ಶಿಕ್ಷಣಕ್ಕೆಂದು ಕ್ಲಸ್ಟರ್ ಹಂತದಲ್ಲಿ ಸಂಪನ್ಮೂಲ ವ್ಯಕ್ತಿಗಳನ್ನು ನೇಮಿಸಿ ಶೈಕ್ಷಣಿಕ ಸಮಾಲೋಚನೆಗೆ ಅನುವು ಮಾಡಿಕೊಟ್ಟಿದೆ. ಆದರೆ ಈ ಕ್ಲಸ್ಟರ್ ಸಂಪನ್ಮೂಲ ವ್ಯಕ್ತಿಗಳು ಶೈಕ್ಷಣಿಕ ಸಮಾಲೋಚನೆಗಿಂತ ಅಂಕಿಅಂಶಗಳನ್ನು ಸಂಗ್ರಹಿಸಿ ಉನ್ನತ ಅಧಿಕಾರಿಗಳಿಗೆ ರವಾನಿಸುವ ಓಲೆಕಾರರಂತೆ ಕೆಲಸ ಮಾಡುವುದೇ ಹೆಚ್ಚು. ಇಡೀ ಶಿಕ್ಷಣ ಇಲಾಖೆ ಗುಣಾತ್ಮಕ ಶಿಕ್ಷಣಕ್ಕಿಂತ ಮಾಹಿತಿಯನ್ನು ಉನ್ನತಾಧಿಕಾರಿಗಳಿಗೆ, ಮಂತ್ರಿವರ್ಯರಿಗೆ ಒದಗಿಸುವುದೇ ತನ್ನ ಗುರಿಯೆಂದು ಭಾವಿಸಿರುವುದೇ ಈ ಎಲ್ಲ ಸಮಸ್ಯೆಗಳಿಗೆ ಕಾರಣ. ಈ ದೇಶದ ಯಾವುದೇ ವ್ಯವಸ್ಥೆಯನ್ನು ತೆಗೆದುಕೊಂಡರೂ, ಅದು ತನ್ನ ನಿಜವಾದ ಗುರಿಯನ್ನು ಉದ್ದೇಶವಾಗಿಟ್ಟುಕೊಂಡು ಕೆಲಸಮಾಡುವುದಿಲ್ಲ. ಅದರ ಗುರಿಯೆಲ್ಲ ಕಾಗದದಮೇಲೆ ಅಂಕಿಅಂಶಗಳನ್ನು ದಾಖಲಿಸುವುದು 'ಇಂಡಿಯ ಈಸ್ ಶೈನಿಂಗ್' ಎಂದು ಹೇಳುವುದು. ಶಿಕ್ಷಣದ ಗುರಿ ಗುಣಾತ್ಮಕ ಶಿಕ್ಷಣದ ಮೂಲಕ ಮಕ್ಕಳ ವ್ಯಕ್ತಿತ್ವ ನಿರ್ಮಾಣ. ಕರ್ತವ್ಯನಿಷ್ಠೆಯಿಂದ ಕೆಲಸ ಮಾಡುವ ಪ್ರಾಮಾಣಿಕ ನೌಕರರಾಗಲಿ, ಅಥವಾ ಈ ವ್ಯವಸ್ಥೆಯ ಬಹುಸಂಖ್ಯಾತ ಭ್ರಷ್ಟರಾಗಲೀ – ಈ ಎರಡು ಬಗೆಯ ಜನಗಳೂ ಆಡಳಿತಾತ್ಮಕ ಕಾರ್ಯವಿಧಾನವನ್ನು ಮಾತ್ರ ಎತ್ತಿಹಿಡಿದು ಮೂಲ ಉದ್ದೇಶವನ್ನು ಸಂಪೂರ್ಣ ಮರೆತುಬಿಡುತ್ತಾರೆ. ಏಕೆಂದರೆ ಸರ್ಕಾರ ಎಂದರೆ 'ನೌಕರಿ'ಗಿಂತ ಹೆಚ್ಚು ಅರ್ಥ ಕೊಡುವ ಮನೋಧರ್ಮ ನಮ್ಮಲ್ಲಿಲ್ಲ. ಬೃಹತ್ ಸಂಖ್ಯೆಯ ಇರುವೆಗಳಾಗಲೀ, ಜೇನುನೊಣಗಳಾಗಲೀ ಹೇಗೆ ಒಂದು ಗುರಿಯನ್ನು ತಮ್ಮ ಎಲ್ಲ ಶ್ರಮದ ಹಿಂದೆ ಕಾಯ್ದುಕೊಳ್ಳುತ್ತವೆಯೋ ಹಾಗೆ ನಮ್ಮ ಸರ್ಕಾರಿ ನೌಕರರು ಒಂದು ಗುರಿಯನ್ನು ಮನಸ್ಸಿನಲ್ಲಿ ಇಟ್ಟುಕೊಂಡು ಕೆಲಸ ಮಾಡುವುದಿಲ್ಲ. ಹೀಗೆ ಒಟ್ಟಾಗಿ ಕೆಲಸ ಮಾಡಿ ಸಾಧಿಸುವುದರಲ್ಲಿ ನಮಗೆ ತೃಪ್ತಿಯೂ ಇಲ್ಲ. ಏಕೆಂದರೆ ಸಾವಿರಾರು ಜನ ಒಟ್ಟಾಗಿ ಶ್ರಮಿಸಿದರೆ ಯಾರೂ ಕೂಡ ವೈಯಕ್ತಿಕವಾಗಿ ಹೆಸರು ಕೀರ್ತಿಗಳನ್ನು ಪಡೆಯುವುದಿಲ್ಲ. ವೈಯಕ್ತಿಕವಾದ ಹೆಸರು ಕೀರ್ತಿಗಳನ್ನು ಬದಿಗೊತ್ತಿ ಸಮಷ್ಟಿ ಕ್ಷೇಮಕ್ಕಾಗಿ ಶ್ರಮಿಸುವ ಮೌಲ್ಯವನ್ನು ನಾವು ಎಲ್ಲೂ ಕಲಿತಿಲ್ಲ. ನಮ್ಮ ಅನುಸರಣೀಯ ಮಾದರಿಗಳೆಲ್ಲ ವೈಯಕ್ತಿಕವಾಗಿ ಶ್ರಮಿಸಿ ಪ್ರಸಿದ್ಧರಾದವರೇ ಹೊರತು ಸಮಷ್ಟಿಯ ಭಾಗವಾಗಿ, ಎಲೆಮರೆಯ ಕಾಯಾಗಿ ಶ್ರಮಿಸುವವರು ನಮ್ಮ ನಡುವೆ ಹೆಚ್ಚಿನ ಸಂಖ್ಯೆಯಲ್ಲಿ ಕಂಡುಬರುವುದಿಲ್ಲ.

ದಿನ ಕಳೆದಂತೆ ವ್ಯವಸ್ಥೆ ದೊಡ್ಡದಾಗುತ್ತ ಹೋಗುತ್ತಿದೆ. ಗುಣಾತ್ಮಕ ಶಿಕ್ಷಣದ ಗುರಿ ಮತ್ತಷ್ಟು ಅಂಚಿಗೆ ಸರಿಯುತ್ತಿದೆ. ವ್ಯವಸ್ಥೆ ತನ್ನದೇ ಭಾರದಿಂದ ಕುಸಿದು 'ಗುಣಾತ್ಮಕ ಶಿಕ್ಷಣ'ದಂತಹ ವಿಷಯಗಳು ಕೇವಲ ಔಪಚಾರಿಕ ಚರ್ಚೆಯಾಗುತ್ತವೆ. ಗುಣಾತ್ಮಕ ಶಿಕ್ಷಣ ನಡೆಯಬೇಕಾದರೆ ಕಟ್ಟಡ, ಮೇಜು, ಕುರ್ಚಿ, ಬೆಂಚು ಮುಂತಾದ

ಪೀಠೋಪಕರಣಗಳೇ ಮೂಲ ಎಂದು ಭಾವಿಸಿ ಅದರ ಕೊರತೆಯನ್ನು ನೀಗಿಸುವುದೇ ಶಿಕ್ಷಣದ ಗುರಿ ಎಂಬಂತೆ ಇಂದಿನ ವ್ಯವಸ್ಥೆ ನಡೆದುಕೊಳ್ಳುತ್ತಿದೆ. ಈಗ ನಾಲ್ಕು ದಶಕಗಳ ಹಿಂದೆ ನಾನು ಪ್ರೌಢಶಾಲಾ ವಿದ್ಯಾರ್ಥಿಯಾಗಿದ್ದಾಗ ತೋರಿಸಿದ ವಿಜ್ಞಾನದ ಪ್ರಯೋಗಗಳು ನನಗಿನ್ನೂ ನೆನಪಿವೆ. ಆದರೆ ಇಂದಿನ ಕಂಪ್ಯೂಟರ್ ಯುಗದಲ್ಲಿ ಬಹುಪಾಲು ಪ್ರೌಢಶಾಲೆಗಳು ಇಡೀ ವರ್ಷದಲ್ಲಿ ಒಂದೇ ಒಂದು ಪ್ರಯೋಗವನ್ನೂ ತೋರಿಸದೆ ಪಾಠ ಮುಗಿಸುತ್ತವೆ. ಸರ್ವಶಿಕ್ಷಣ ಅಭಿಯಾನದಡಿ ಕೋಟ್ಯಂತರ ರೂಪಾಯಿ ಹಣ ಖರ್ಚು ಮಾಡಿದ್ದರೂ ಗುಣಾತ್ಮಕ ಶಿಕ್ಷಣದ ಕನಸಾಗಿಯೇ ಉಳಿದಿದೆ.

ಇಷ್ಟಾದರೂ ಸರ್ವಶಿಕ್ಷಣ ಅಭಿಯಾನದ ಅಂಗವಾಗಿ ಪರಿಣತರ ಸಮಿತಿಯೊಂದು ಗುಣಾತ್ಮಕ ಶಿಕ್ಷಣಕ್ಕಾಗಿ ತರಬೇತಿ ಕೈಪಿಡಿಯನ್ನು ತಯಾರಿಸಿದೆ.* ಈ ಪುಸ್ತಕವು ಗುಣಾತ್ಮಕ ಶಿಕ್ಷಣದ ಬಹುಮುಖಗಳನ್ನು ವಿವರಿಸಿ ಅದನ್ನು ಸಾಧಿಸಬಹುದಾದ ವಿಧಾನಗಳನ್ನು ಸೂಚಿಸುತ್ತದೆ. ಆದರೆ ಈ ಪುಸ್ತಕದ ವಸ್ತು ದೇಶದ ಎಲ್ಲ ಪ್ರಾಥಮಿಕ ಶಾಲಾ ಅಧ್ಯಾಪಕರನ್ನು ಮುಟ್ಟಬಲ್ಲುದೇ ಎಂಬುದು ದೊಡ್ಡ ಪ್ರಶ್ನೆ. ಗುಣಾತ್ಮಕ ಶಿಕ್ಷಣವನ್ನು ರಾಷ್ಟ್ರವ್ಯಾಪಿಯಾಗಿ ಅನುಷ್ಠಾನಕ್ಕೆ ತರುವುದು ಒಂದೆರಡು ದಿನಗಳಲ್ಲಿ ಸಾಧ್ಯವಾಗುವ ಮಾತಲ್ಲ. ಆದರೂ ಗುಣಾತ್ಮಕ ಶಿಕ್ಷಣವಲ್ಲದೆ ನಮಗೆ ಬೇರೆ ದಾರಿ ಇಲ್ಲ. ಹಾಗಾಗಿ ಈ ಬಗ್ಗೆ ಮಾತನಾಡುವುದು, ಬಿಸಿಬಿಸಿ ಚರ್ಚೆಗಳನ್ನು ಮಾಡುವುದು, ನಮಗೆ ತೋರುವ ಸಾಧ್ಯತೆಗಳನ್ನನುಸರಿಸಿ ಪ್ರಾಯೋಗಿಕವಾಗಿ ಕೆಲಸ ಮಾಡುವುದು ಅತ್ಯಗತ್ಯ. ಎಲ್ಲಕ್ಕಿಂತ ಮುಖ್ಯವಾಗಿ ಗುಣಮಟ್ಟದ ಶಿಕ್ಷಣಕ್ಕೆ ಸಂಬಂಧಪಟ್ಟ ಸುಲಭಸಾಧ್ಯವಾದ ಕ್ರಮಗಳನ್ನಾದರೂ ಅನುಷ್ಠಾನಕ್ಕೆ ತರುವಂತೆ ಸರ್ಕಾರದ ಮೇಲೆ ಒತ್ತಡ ಹೇರಬೇಕು. ಸಮುದಾಯ- ಶಾಲೆಯ ಸಂಬಂಧವನ್ನು ಮತ್ತಷ್ಟು ಬಲಪಡಿಸಿ ಸಮುದಾಯವೇ ಗುಣಮಟ್ಟದ ಶಿಕ್ಷಣವನ್ನು ಆಗ್ರಹಿಸಿಕೇಳುವಂತೆ ಸಾಮಾಜಿಕ ಜಾಗೃತಿಯನ್ನು ಮೂಡಿಸಬೇಕು.

ಗುಣಾತ್ಮಕ ಶಿಕ್ಷಣಕ್ಕೆ ಬೇಕಾದ ಸಹಜಶೀಲತೆ ಮತ್ತು ಗುರುಕುಲ ಪದ್ಧತಿ

ನಿಜವಾದ ಕಲಿಕೆ ಉಂಟಾಗಲು ಮನಸ್ಸು ಒಂದು ಸಮಾಧಾನ ಸ್ಥಿತಿಯಲ್ಲಿರಬೇಕು ಅಥವಾ ವ್ಯವಧಾನ ಇರಬೇಕು. ಕಲಿಕೆಯ ಈ ಸಂದರ್ಭದಲ್ಲಿ ಹಿಂದಿನ ಅಥವಾ ಮುಂದಿನ ಕಾಲಗಳಿಗೆ ಸಂಬಂಧಪಟ್ಟ ಆತಂಕಗಳಿಂದ ಮಗು ಮುಕ್ತವಾಗಿರಬೇಕು. ಯಾವುದೋ ಜವಾಬ್ದಾರಿಯನ್ನು ಭರಿಸಲೇಬೇಕು ಎಂಬ ಆತಂಕದ ಮಧ್ಯೆ ಮಗು ಮುಕ್ತವಾದ ಮನಸ್ಸನ್ನು ಪಡೆಯಲಾರದು. ಇಂದಿನ ಜಾಗತೀಕರಣದ ಅವಸರ ಪ್ರಪಂಚ ಇಂತಹ ಸಹಜಶೀಲತೆಯನ್ನು ಮಕ್ಕಳಿಂದಲೂ ಕಸಿದುಕೊಂಡುಬಿಟ್ಟಿದೆ. ಜ್ಞಾನದ ನಿರ್ಮಾಣ

* Modules on Quality Dimensions of Elementary Education under SSA.

ಎಂದು ನಾವು ಏನು ಹೇಳುತ್ತೇವೊ ಅದು ಮುಕ್ತವಾದ ತೆರೆದ ಮನಸ್ಸಿನ ಸ್ಥಿತಿಯಲ್ಲಿ ಮಾತ್ರ ಸಾಧ್ಯ. ಒಬ್ಬ ಮನುಷ್ಯನಲ್ಲಿ ಸಹಜಶೀಲತೆ ಉಳಿಯಬೇಕಾದರೆ, ಬೆಳೆಯಬೇಕಾದರೆ ಅವನ ಬಾಲ್ಯ ಇಂತಹ ವ್ಯವಧಾನ ಶೀಲತೆಯನ್ನು ಬೆಳೆಸಿಕೊಳ್ಳಲು ಪೂರಕವಾಗಿರಬೇಕು. ಎಲ್ಲವನ್ನೂ ಅವಸರದ ಓಡುಗತಿಯಲ್ಲೇ ನಿರ್ವಹಿಸಬೇಕಾದ ಅನಿವಾರ್ಯತೆ ಮಗುವಿಗೆ ಬಂದೊದಗಿದರೆ ಮಗು ಈ ಬಗೆಯ ನಿರಾತಂಕವಾದ ಸಹಜಶೀಲತೆಯನ್ನು ಬೆಳೆಸಿಕೊಳ್ಳುವುದೇ ಇಲ್ಲ. ಬಾಲ್ಯದಲ್ಲಿ ಈ ವ್ಯವಧಾನವನ್ನು ಬೆಳೆಸಿಕೊಳ್ಳದ ಮಕ್ಕಳು ಮುಂದೆಂದೂ ಈ ಸಹಜಶೀಲತೆಯನ್ನು ಬೆಳೆಸಿಕೊಳ್ಳಲಾಗುವುದಿಲ್ಲ.

ನಾವು ಬದುಕುವ ಈ ಅವಸರದ, ಓಟದ ಬದುಕು ಯಾರಿಗಾಗಿ, ಯಾವ ಪುರುಷಾರ್ಥಕ್ಕಾಗಿ? ಇದನ್ನು ಪ್ರಶ್ನಿಸಿ ಈ ಅಸಹಜತೆಯಿಂದ ಬೇರೆಯಾಗಿ ನಿಲ್ಲಬಲ್ಲ ಶಕ್ತಿಯನ್ನು ಕೊಡುವ ಪ್ರಕ್ರಿಯೆಯನ್ನೇ ನಾವು ಶಿಕ್ಷಣ ಎನ್ನಬೇಕು. ಆದರೆ ನಮ್ಮ ಶಿಕ್ಷಣ ಇಂತಹ ಮೂಲಭೂತ ಉದ್ದೇಶಗಳನ್ನು ಗಮನಕ್ಕೇ ತೆಗೆದುಕೊಳ್ಳುತ್ತಿಲ್ಲ. ಅನಗತ್ಯವಾದ ವೇಗ ಕಂಪ್ಯೂಟರ್ ಜಗತ್ತಿನ ಸಾಧ್ಯತೆಗಳೊಡನೆ ಕೂಡಿಕೊಂಡು ಬದುಕನ್ನು ವ್ಯವಧಾನರಹಿತವಾಗಿ ಮಾಡಿದೆ. ತಾಂತ್ರಿಕತೆ ಸರಕುಪ್ರಪಂಚದಲ್ಲಿ ಅಥವಾ ಹೊರಜಗತ್ತಿನಲ್ಲಿ ಅದ್ವಿತೀಯವಾದುದನ್ನು ಸಾಧಿಸಲು ಸಹಕಾರಿಯಾಗಿದೆ. ಆದರೆ ಈ ತಾಂತ್ರಿಕ ಸಾಧ್ಯತೆಗಳು ನಮ್ಮ ಒಳಗಿನ ಪ್ರಪಂಚದಲ್ಲಿ, ಎಂದರೆ ನಮ್ಮ ಮನೋಲೋಕದಲ್ಲಿ ಏನು ಪರಿಣಾಮ ಉಂಟುಮಾಡುತ್ತಿದೆ ಎಂದು ನಾವು ಗುರುತಿಸಬೇಡವೇ? ಮುಕ್ತವಾದ ಮನಸ್ಸಿನಿಂದ ನೋಡಿದರೆ ಕಾಣುತ್ತದೆ – ಈ ತಾಂತ್ರಿಕ ಸಾಧ್ಯತೆ ನಮ್ಮ ವಸ್ತುಸಂಬಂಧವಾದ ಕೌಶಲಗಳನ್ನು ಹೆಚ್ಚಿಸುತ್ತಿದೆ. ಆದರೆ ನಾವು ಮಾಡುವ ಪ್ರತಿಯೊಂದು ಕೆಲಸದ ಹಿಂದಿನ ಉದ್ದೇಶ ಮಾತ್ರ ಹುಟ್ಟರಿವುನಿಂದ ಗಟ್ಟಿಗೊಳ್ಳುತ್ತಾ ಹೋಗುತ್ತಿದೆ. ತೋರಿಕೆಗೆ ಸಮಷ್ಟಿಯನ್ನು ಗಮನದಲ್ಲಿಟ್ಟುಕೊಂಡಂತೆ ಕಂಡರೂ ಅದರ ಮೂಲೋದ್ದೇಶ ಹುಟ್ಟರಿವುಗಳ ಸುತ್ತ ಹೆಣೆದ ಸ್ವಾರ್ಥವಲ್ಲದೆ ಬೇರಲ್ಲ. ತಂತ್ರಜ್ಞಾನ ಬಳಸಿ ಅತಿ ಹೆಚ್ಚು ಸಾಧಿಸಬೇಕೆಂಬ ಗುರಿಯ ಹಿಂದೆ ದುರಾಸೆ ಮೂಲದ ಹುಟ್ಟರಿವು ಕೆಲಸ ಮಾಡುತ್ತದೆ. ಈ ದುರಾಸೆ ಪ್ರೇರಿತ ಕಾರ್ಯಸಾಧನೆಯ ನಡುವೆ ಸಮಷ್ಟಿಹಿತದ ಮಾತುಗಳು ಅಪರಾಧಿ ಪ್ರಜ್ಞೆಯನ್ನು ಮುಚ್ಚಿಕೊಳ್ಳುವ ಒಂದು ಮುಖವಾಡ ಮಾತ್ರ. ದೊಡ್ಡದಾಗಿ ಬೆಳೆಯಬೇಕೆಂಬ ಮಹತ್ವಾಕಾಂಕ್ಷೆಯ ಹಿಂದೆ ದುರಾಸೆಯಷ್ಟೇ ಕೆಲಸ ಮಾಡಬಲ್ಲುದು. ದುರಾಸೆಯ ಹಿಂದೆ ವ್ಯಕ್ತಿಗತವಾಗಿ ಬದುಕುಳಿಯಲು ಪೂರಕವಾದ ಹುಟ್ಟರಿವು ಕೆಲಸ ಮಾಡುತ್ತದೆ. ತಾಂತ್ರಿಕ ಸಾಧ್ಯತೆಗಳ ವಿಸ್ತಾರ ಮೂಲತಃ ಈ ಹುಟ್ಟರಿವುಗಳ ವಿಸ್ತಾರವೇ ಆಗಿಬಿಡುವುದರಿಂದ ಪರಿಣಾಮ ಅರ್ಥವೇ ಇಲ್ಲದ ಸ್ವಾರ್ಥವಾಗಿದೆ. ಒಬ್ಬ ಮನುಷ್ಯ ತನ್ನ ಅಗತ್ಯಕ್ಕಿಂತ ಹೆಚ್ಚಾಗಿ ಸಂಗ್ರಹಿಸುತ್ತಲೇ ಬದುಕುತ್ತಾನೆ. ಅವನ ಇಡೀ ಜೀವನ ಬರೀ ಸಂಗ್ರಹಿಸುವುದರಲ್ಲೇ ಮುಗಿದುಹೋಗುತ್ತದೆ. ಅವನಿಗೆ ಈ ಬದುಕಿನ ಸೌಂದರ್ಯ ಸಂತೋಷಗಳ ಮಿಂಚು ನೋಟವೂ ಸಿಗುವುದಿಲ್ಲ. ನಮ್ಮ ಶಿಕ್ಷಣ ಹೇಳಿಕೊಡುವ

ತಾಂತ್ರಿಕ ಸಾಧ್ಯತೆಗಳು ಹೀಗೆ ಮನುಷ್ಯನ ಹುಟ್ಟರಿವುಗಳನ್ನು ಬಲಗೊಳಿಸುತ್ತ ಹೋಗುತ್ತದೆ. ಅದು ಈ ಹುಟ್ಟರಿವುಗಳ ಪ್ರಭಾವದಿಂದ ಬಿಡುಗಡೆ ಪಡೆಯುವುದನ್ನು ಕಲಿಸುವುದಿರಲಿ, ಈ ಬಿಡುಗಡೆಯ ಮಹತ್ವವನ್ನು ಕೂಡ ಮನಗಂಡಿಲ್ಲ.

ಗುರುಕುಲ ಪದ್ಧತಿ ಮತ್ತು ಹುಟ್ಟರಿವುಗಳ ನಿಯಂತ್ರಣ

ನಮ್ಮ ಗುರುಕುಲ ಪದ್ಧತಿ ಈ ಹುಟ್ಟರಿವುಗಳು ಮನುಷ್ಯರನ್ನು ಸವಾರಿ ಮಾಡದಂತೆ ತಡೆಯುವ ವಿಧಿವಿಧಾನಗಳಿಗೆ ಮಹತ್ವ ನೀಡಿತ್ತು. ಶಿಕ್ಷಣ ಎಂದರೆ ನಮ್ಮೊಳಗೆ ಇದ್ದು ನಮ್ಮನ್ನಾಳುವ ಶಕ್ತಿಗಳಿಂದ ಬಿಡುಗಡೆ ಪಡೆಯುವುದು ಎಂದು ಅರ್ಥ ಮಾಡಿಕೊಳ್ಳಬೇಕು. ಆದರೆ ಕೇವಲ ನಿಗ್ರಹಕ್ಕಾಗಿ ನಿಗ್ರಹ ಎಂಬ ಕುಬ್ಜ ದೃಷ್ಟಿ ಇದಲ್ಲ. ಈ ಗುರುಕುಲ ಪದ್ಧತಿಯ ಮೂಲ ಆಶಯವೇನೆಂದರೆ ಈ ಹುಟ್ಟರಿವುಗಳ ಅಟ್ಟಹಾಸ ಕೊನೆಗೊಂಡರೆ ಅಥವಾ ನಿಯಂತ್ರಣಕ್ಕೆ ಬಂದರೆ ಯಾವುದನ್ನು ನಾವು 'ವ್ಯವಧಾನ' ಎಂದು ಚರ್ಚಿಸಿದೆವೊ ಅದನ್ನು ನಮಗೆ ದೊರಕಿಸಿಕೊಡುವುದು; ತನ್ಮೂಲಕ ಜ್ಞಾನ ಸಂಪಾದನೆಯನ್ನು ಸಾಧ್ಯವಾಗಿಸುವುದು. ಹೀಗೆ ಜ್ಞಾನ ಎಂಬುದೊಂದಿದೆ; ಅದು ಹುಟ್ಟರಿವುಗಳ ಹೊರತಾಗಿಯೂ ಇರುವ ನನ್ನ ಸ್ವಸ್ವರೂಪವೇ ಆಗಿದೆ; ಆ ಸ್ವರೂಪವೇ ಈ ಜಗತ್ತಾಗಿದೆ; ಎಂದರೆ ಮೂಲತಃ ನನ್ನ ಸ್ವರೂಪ ಮತ್ತು ಈ ಜಗತ್ತಿನ ಮೂಲಸ್ವರೂಪ ಭಿನ್ನವಲ್ಲ; ಆದ್ದರಿಂದ ನನ್ನನ್ನು ನಾನು ಅರಿಯುವ ಮೂಲಕ ಇಡೀ ಜಗತ್ತನ್ನೇ ಅರಿಯುತ್ತೇನೆ. ಇಂತಹ ಜ್ಞಾನ ಸಂಪಾದನೆಗೆ ನಾನು ಯಾವ ತ್ಯಾಗಕ್ಕೂ ಸಿದ್ಧ ಎಂಬ ಮನೋಧರ್ಮವನ್ನು ರೂಢಿಸಿ ಜ್ಞಾನಾರ್ಜನೆಗೆ ನಮ್ಮನ್ನು ಸಿದ್ಧಪಡಿಸುವುದೇ ಗುರುಕುಲ ಪದ್ಧತಿಯ ಶಿಕ್ಷಣ.

ಈ ಸಂದರ್ಭದಲ್ಲಿ ಮತ್ತೊಂದು ಬಹುಮುಖ್ಯವಾದ ಅಂಶವನ್ನು ನಾವು ಗುರುತಿಸಬೇಕು. ನಮ್ಮೊಳಗೆ ಇದ್ದು ನಮ್ಮನ್ನು ಆಳುವ ಈ ಹುಟ್ಟರಿವಿನ ನಿಯಂತ್ರಣ ಕೇವಲ ವೈಚಾರಿಕತೆಯಿಂದ ಸಾಧ್ಯವಿಲ್ಲ. ತಂತ್ರಜ್ಞಾನದ ಪ್ರಗತಿಗೆ ವೈಚಾರಿಕತೆಯೇ ಮೂಲಸಾಧನ. ಹಾಗಾಗಿ ನಮಗೆ ವೈಚಾರಿಕತೆ ಬಿಟ್ಟರೆ ಬೇರಾವ ಸಾಧನಗಳ ಬಗೆಗೂ ನಂಬಿಕೆಯಿಲ್ಲ. ಮನುಷ್ಯ ತನ್ನ ವಿಚಾರ ಮಾಡುವ ಶಕ್ತಿಯಿಂದಾಗಿ ಹೊರಜಗತ್ತಿನಲ್ಲಿ ಅದ್ವಿತೀಯವಾದುದನ್ನು ಸಾಧಿಸಿದ್ದಾನೆ. ವೈಚಾರಿಕತೆಯಿಂದ ಅನೇಕ ಸಾಮಾಜಿಕ ಬದಲಾವಣೆಗಳ ಸಾಧಿಸಿದ್ದಾನೆ. ಆದರೆ ಇದೇ ವೈಚಾರಿಕ ಶಕ್ತಿ ವಿನಾಶಕ್ಕೂ ಕಾರಣವಾಗಿದೆ ಎಂಬುದನ್ನೂ ಮರೆಯುವಂತಿಲ್ಲ. ಜನಸಂಖ್ಯೆ ಹೆಚ್ಚಾಗಿ ಮನುಷ್ಯ ತನ್ನ ಅಸ್ತಿತ್ವಕ್ಕಾಗಿ ಪರದಾಡುವ ಪರಿಸ್ಥಿತಿ ಬಂದಿರುವ ಈ ದಿನಗಳಲ್ಲಂತೂ ಅವನ ಕಟ್ಟುವ ಶಕ್ತಿಗಿಂತ ಕೆಡಹುವ ಶಕ್ತಿ ಹೆಚ್ಚಾಗುತ್ತಿದೆ. ಸ್ಪರ್ಧಾತ್ಮಕ ಪ್ರಪಂಚದಲ್ಲಿ ಇತರರನ್ನು ಅಥವಾ ಇತರರು ಕಟ್ಟಿದ್ದನ್ನು ಕೆಡವಿ ಮೆಟ್ಟಿನಿಂತು ಮೇಲೆ ಬರುವ ಅವಿರತ ಪ್ರಯತ್ನ ಕಂಡುಬರುತ್ತಿದೆ. ಈ ಸಮಸ್ಯೆಗಳಿಗೆ ನಮ್ಮ ವಿಚಾರ ಶಕ್ತಿ ಯಾವ ಔಷಧಿಯನ್ನು ಕೊಡುತ್ತಿದೆ ಎಂದು

ಪ್ರಶ್ನಿಸುವ ವಿವೇಕವನ್ನು ನಮ್ಮ ಇಂದಿನ ಶಿಕ್ಷಣ ನಮಗೆ ಕೊಡುತ್ತಿಲ್ಲ. ಇದು ವೈಚಾರಿಕತೆ ಅಥವಾ ವಿಚಾರಶಕ್ತಿಯ ಪರಿಮಿತಿಗಳನ್ನು ತೋರುತ್ತದೆ. ವಿಚಾರಶಕ್ತಿ ನಮ್ಮ ಮನಸ್ಸಿನ ಆಳಕ್ಕೆ ನುಗ್ಗಿ ಹುಟ್ಟರಿವುಗಳೊಡನೆ ಅನುಸಂಧಾನ ಮಾಡಲಾರದು. ಹಾಗಾಗಿ ಹುಟ್ಟರಿವುಗಳ ಆಳಕ್ಕೆ ನುಗ್ಗಬಹುದಾದದ್ದನ್ನು ವೈಚಾರಿಕವಾಗಿ ನಾವು ರುಜುವಾತು ಮಾಡಲಾರೆವು. ಉದಾಹರಣೆಗೆ ಆಧ್ಯಾತ್ಮಿಕ ಸಾಧನೆಗಳೆಂದು ಪರಿಗಣಿಸಲ್ಪಟ್ಟಿರುವ ಜಪ, ಧ್ಯಾನ; ಪ್ರಾರ್ಥನೆ, ನಾಮಸ್ಮರಣೆ, ಸಂಕೀರ್ತನೆ ಮೊದಲಾದುವು. ಇವುಗಳನ್ನು ನಮ್ಮ ನಡುವಿನ ವಿಚಾರವಂತರು ಲೇವಡಿ ಮಾಡುತ್ತಾರೆ. ಮೂಢನಂಬಿಕೆಗಳು, ಕಂದಾಚಾರ ಪದ್ಧತಿಗಳೇ ಪ್ರಧಾನವಾಗಿ ಕಾಣುವ ಅನೇಕ ಸಂದರ್ಭಗಳಲ್ಲಿ ಹೀಗೆ ಲೇವಡಿ ಮಾಡುವುದು ಸ್ವಾಭಾವಿಕ. ವಿಚಾರಕ್ಕೆ ಎಟುಕದ ಇಂತಹ ಅನೇಕ ವಿದ್ಯಮಾನಗಳನ್ನು ನಾವು ಅವುಗಳ ಪರಿಣಾಮದಿಂದ ಮಾತ್ರ ಗುರುತಿಸಬಹುದು. ಇದಕ್ಕೆ ಯಾವ ಪೂರ್ವಗ್ರಹಗಳೂ ಇಲ್ಲದ ಆರೋಗ್ಯಕರವಾದ ಮನಸ್ಸು ಬೇಕು.

ನಮ್ಮ ಸಂಸ್ಕೃತಿಯಲ್ಲಿ ಅಥವಾ ಗುರುಕುಲ ಪದ್ಧತಿಯಲ್ಲಿ ಪ್ರಚಲಿತವಿದ್ದ ಈ ವಿಧಾನಗಳು ಸಂಪೂರ್ಣ ನಿರರ್ಥಕ ಎಂದು ಪಕ್ಕಕ್ಕೆ ತಳ್ಳಿದರೆ ನಾವು ಅಮೂಲ್ಯವಾದುದನ್ನು ಕಳೆದುಕೊಳ್ಳುತ್ತೇವೆ. ಆದರೆ ಇದೇ ವಿಧಿವಿಧಾನಗಳನ್ನು ಮನಸ್ಸಿನ ಆಳದಲ್ಲಿರುವ ನಮ್ಮ ಹುಟ್ಟರಿವುಗಳ ನಿಯಂತ್ರಣಕ್ಕೆ ಉದ್ದೇಶಪೂರ್ವಕವಾಗಿ ಬಳಸುವುದಾದರೆ ಅದು ವೈಚಾರಿಕತೆಗೆ ಸಾಧ್ಯವಾಗದ ಇತ್ಯಾತ್ಮಕ ಪರಿಣಾಮಗಳನ್ನು ನೀಡುತ್ತದೆ. ಆಳವಾಗಿ ಮನಸ್ಸಿನಲ್ಲೇ ಮುಳುಗುವ ಈ ಪ್ರಕ್ರಿಯೆಯಲ್ಲಿ ಒಂದು ಗಾಢವಾದ ನಂಬಿಕೆ ಕೆಲಸ ಮಾಡುತ್ತದೆ. ಈ ನಂಬಿಕೆ ಯಾವುದೆಂದರೆ ಮನುಷ್ಯ ತನ್ನ ಆಂತರ್ಯವನ್ನು ತಾನೇ ಬದಲಾಯಿಸಿಕೊಳ್ಳಬಲ್ಲ, ತನ್ನ ಕಾರ್ಯಗಳಿಗೆ ತಾನೇ ಹೊಣೆಗಾರಿಕೆಯನ್ನು ಭರಿಸಬಲ್ಲ; ಆ ಕಾರಣದಿಂದ ತನ್ನ ಕೃತ್ಯಗಳ ಮೇಲೆ ನಿಯಂತ್ರಣ ಸಾಧಿಸಬಲ್ಲ ಎನ್ನುವುದು. ಹೀಗೆ ಒಂದು ಗಾಢವಾದ ನಂಬಿಕೆಯೊಡನೆ ಜಪ, ಧ್ಯಾನ, ಭಜನೆಗಳ ಮೂಲಕ ತನ್ನದೇ ಮನಸ್ಸಿನ ಆಳವನ್ನು ಸಂಪರ್ಕಿಸಿದರೆ ಆಗ ಒಳಗೇ ಇದ್ದು ಆಳುವ ಶಕ್ತಿಗಳಿಂದ ಬಿಡುಗಡೆ ಪಡೆಯಲು ಸಾಧ್ಯವಾಗುತ್ತದೆ. ಕೊನೆಯ ಪಕ್ಷ ಅವುಗಳ ನಿಯಂತ್ರಣವಾದರೂ ಸಾಧ್ಯವಾಗುತ್ತದೆ. ಈ ಪ್ರಯತ್ನದಲ್ಲಿ ನಾವು ಒಂದು ಆಂತರಿಕ ಶಕ್ತಿಯನ್ನು ಸಂಪಾದಿಸಬಹುದು. ಈ ಶಕ್ತಿ ಮನುಷ್ಯನ ಮೂಲಭೂತ ಸ್ವರೂಪವನ್ನು ಬದಲಿಸಿಬಿಡುತ್ತದೆ. ಮನುಷ್ಯ ತನ್ನ ಮೂಲಭೂತ ಸ್ವರೂಪವನ್ನು ಹೀಗೆ ಬದಲಿಸಿಕೊಂಡಾಗ ಸದಾಕಾಲವೂ ಸಹಜಶೀಲತೆಯಿಂದ ಮತ್ತು ವ್ಯವಧಾನದಿಂದ ಕೂಡಿರುತ್ತಾನೆ. ಅವನಿಗೆ ಶ್ರದ್ಧೆ ಮೂಡುತ್ತದೆ. ಈ ಎಲ್ಲದರ ಪರಿಣಾಮವಾಗಿ ಉಂಟಾಗುವ ಇತ್ಯಾತ್ಮಕ ಮನೋಧರ್ಮವೇ ಶ್ರದ್ಧೆ. ಶ್ರದ್ಧೆಯಿರುವ ಯಾವುದೇ ವ್ಯಕ್ತಿ ಒಳಗೂ ಹೊರಗೂ ಶಾಂತಿಯನ್ನು ಸಂಪಾದಿಸುತ್ತಾನೆ, ಸತ್ಯವನ್ನರಿಯುತ್ತಾನೆ. ಒಟ್ಟಿನಲ್ಲಿ ಬದುಕಿನ ಸೌಂದರ್ಯವನ್ನು ಅಸ್ವಾದಿಸುವ ವ್ಯವಧಾನವನ್ನು ಪಡೆಯುತ್ತಾನೆ.

ಗುಣಾತ್ಮಕ ಶಿಕ್ಷಣ ಮತ್ತು ಜೀವನದ ಸವಾಲುಗಳು

"ಗುಣಾತ್ಮಕ ಶಿಕ್ಷಣವು ಬದುಕಿನ ಸವಾಲುಗಳನ್ನು ಎದುರಿಸಲು ಮಕ್ಕಳನ್ನು ತಯಾರು ಮಾಡಬೇಕು" ಎಂಬ ಹೇಳಿಕೆ ಆಗಾಗ ಕೇಳಿಬರುತ್ತದೆ. ಬದುಕು ಎಂಬುದು ಸದಾ ಸವಾಲಿನ ಪ್ರಶ್ನೆಯಾದರೆ ಬದುಕಿನ ಸೌಂದರ್ಯ ಜೀವನಪ್ರೀತಿಗಳು ಉಳಿಯುತ್ತವೆಯೇ? ನಾವು ಬದುಕನ್ನು ಸವಾಲು ಎಂದು ಏಕೆ ಪರಿಗಣಿಸುತ್ತೇವೆ? ಈ ದೃಷ್ಟಿಯ ಹಿಂದೆ ಬದುಕಿನ ಬಗ್ಗೆ, ಈ ಜಗತ್ತಿನ ಬಗ್ಗೆ ಒಂದು ಆತಂಕದ ಅಪನಂಬಿಕೆಯ ದುಗುಡವಿದೆ. ಮನಸ್ಸಿನ ಆರೋಗ್ಯಕ್ಕೆ ಮಂಗಳದೃಷ್ಟಿ ಅಗತ್ಯ ಎಂಬುದನ್ನು ನಾವು ತಳ್ಳಿ ಹಾಕುವಂತಿಲ್ಲ. ಶಿಕ್ಷಣ ಬದುಕನ್ನು ಕೇವಲ ಸವಾಲು ಎಂಬ ಅರಿವಿನಿಂದ ಮಕ್ಕಳನ್ನು ತಯಾರು ಮಾಡುವುದಾದರೆ ಅದು ಜಗತ್ತನ್ನು ಅಪನಂಬಿಕೆಯ ಆಗರವನ್ನಾಗಿ ಮಾಡುವುದರಲ್ಲಿ ಸಂಶಯವಿಲ್ಲ. ಈ ಚರ್ಚೆಯ ಅರ್ಥ ಬದುಕಿನ ಸವಾಲುಗಳು ಅವಾಸ್ತವ ಎಂಬುದಲ್ಲ. ಆದರೆ ಇರುವ ಸವಾಲುಗಳನ್ನು ಇರುವಷ್ಟು ಪ್ರಮಾಣದಲ್ಲಿ ಮಾತ್ರ ನಾವು ನೋಡುತ್ತೇವೆಯೇ ಅಥವಾ ಈ ಸವಾಲುಗಳಿಗೆ ನಮ್ಮ ಆತಂಕದಿಂದಾಗಿ ಹುಟ್ಟುವ ಭ್ರಮಾತ್ಮಕ ಅವಘಡಗಳೂ ಸೇರಿಕೊಳ್ಳುತ್ತವೆಯೆ ಎನ್ನುವುದು ಇಲ್ಲಿ ಮುಖ್ಯ. ವಾಸ್ತವವಾಗಿ ದೊಡ್ಡವರು ಕಾಣುವಷ್ಟು ಅಪಾಯಗಳನ್ನು ಮಕ್ಕಳು ಈ ಪ್ರಪಂಚದಲ್ಲಿ ಕಾಣುವುದಿಲ್ಲ. ದೊಡ್ಡವರು ಕಾಣುವಷ್ಟು ಅಪಾಯಗಳು ಮಕ್ಕಳ ಈ ಜಗತ್ತಿನಲ್ಲಿ ಇರುವುದಿಲ್ಲ ಎಂಬುದು ನಮ್ಮ ಪ್ರಶಾಂತ ಮನಸ್ಸಿಗೆ ಕಂಡುಬರುತ್ತದೆ. ಈ ಜಗತ್ತು ನಂಬಿಕೆಗೆ ಅರ್ಹವಾದ ಪ್ರದೇಶವಲ್ಲ; ಇಲ್ಲಿ ಸದಾ ಕಾಲವೂ ನನ್ನ ಎಚ್ಚರದಲ್ಲಿ ನಾನಿರಬೇಕು ಎಂಬ ಆತಂಕ, ದುಗುಡ ತುಂಬಿದ ಮನಃಸ್ಥಿತಿಯಲ್ಲಿ ಮಾತ್ರ ನಾವು ಈ ಪ್ರಪಂಚವನ್ನು ಎದುರಿಸಬೇಕೆ? ಇದನ್ನೇ ಮಕ್ಕಳಿಗೆ ಕಲಿಸಬೇಕೆ? ಶಿಕ್ಷಣ ಈ ಜಗತ್ತು ಸ್ನೇಹರಂಗ ಎಂಬ ನಂಬಿಕೆಯನ್ನು ಹುಟ್ಟಿಸಬೇಕೆ ಹೊರತು ರಣರಂಗ ಎಂಬ ಭಾವನೆಯನ್ನು ಹುಟ್ಟಿಸಬಾರದು. ಈ ಜಗತ್ತು ಹೇಗೆ ಇದೆಯೊ ಹಾಗೆ ನಾವು ನೋಡಲು ಸಾಧ್ಯವಾದರೆ ಅದು ರಣರಂಗವಾಗಬೇಕಾಗಿಲ್ಲ.

ಇಲ್ಲಿ ಮನಃಶಾಸ್ತ್ರೀಯವಾದ ಮತ್ತೊಂದು ಅಂಶವನ್ನು ನಾವು ಗುರುತಿಸಬೇಕು. ಎರಿಕ್ ಎರಿಕ್ ಸನ್ ಎಂಬ ಮನೋವಿಜ್ಞಾನಿ ಹೇಳುವಂತೆ ಈ ಜಗತ್ತಿನ ಬಗ್ಗೆ ನಂಬಿಕೆ–ಅಪನಂಬಿಕೆಗಳು (Trust-Mistrust) ನಮ್ಮ ಶೈಶವದಲ್ಲೆ ರೂಪುಗೊಳ್ಳುತ್ತವೆ. ಹುಟ್ಟಿದ ಮೊದಲ ತಿಂಗಳುಗಳಲ್ಲಿ ತಾಯಿಯಾದವಳು ಮಗುವಿಗೆ ಸದಾ ಕಾಲವೂ ಸಮೀಪದಲ್ಲೇ ಇದ್ದುಕೊಂಡು ಹಸಿವಾದಾಗ ಹಾಲುಣಿಸಿ ಗಲೀಜು ಮಾಡಿಕೊಂಡಾಗ ತಡಮಾಡದೆ ಸ್ವಚ್ಛ ಮಾಡಿ ಮಗುವನ್ನು ಚೆನ್ನಾಗಿ ನೋಡಿಕೊಂಡರೆ ಈ ಮಕ್ಕಳು 'ನಾನು ಇರುವ ಈ ಪ್ರಪಂಚ ನಂಬಲರ್ಹವಾದದ್ದು, ಆತಂಕಕ್ಕೆ ಕಾರಣವಿಲ್ಲ' ಎಂಬ ಅನುಭವ ಪಡೆಯುತ್ತವೆ. ಈ ಅನುಭವ ಭಾವನಾ ರೂಪದಲ್ಲಿ ಮೆದುಳಿನ ನರಾಂತರ್ಜಾಲವಾಗಿ ಮುದ್ರಿತವಾಗುತ್ತದೆ. ಇಂತಹ ಮಕ್ಕಳು ಈ ಜಗತ್ತನ್ನು ನಂಬುತ್ತಾರೆ.

ಮಗು ಅನಂತರ ಪಡೆಯುವ ಅನುಭವಗಳು ಈ ಮೂಲನಂಬಿಕೆಯನ್ನಾಧರಿಸಿ ರೂಪುಗೊಳ್ಳುತ್ತದೆ. ಹಾಗಾಗಿ ಇಂತಹ ಮಕ್ಕಳು ಅನುಮಾನಪೀಡಿತರಾಗಿರುವುದಿಲ್ಲ. ಈ ಜಗತ್ತು ಸಹ್ಯವಾದ ಸುಂದರವಾದ ತಾಣ ಎಂಬ ನಿಲುವಿಗೆ ಬಂದು ನಿಲ್ಲುತ್ತಾರೆ. ಆದರೆ ಇದಕ್ಕೆ ವ್ಯತಿರಿಕ್ತ ಅನುಭವ ಪಡೆದ ಮಕ್ಕಳು ಶೈಶವದಿಂದಲೇ ಅಪನಂಬಿಕೆಯ ಅನುಭವದ ಸುತ್ತ ತಮ್ಮ ವ್ಯಕ್ತಿತ್ವವನ್ನು ಬೆಳೆಸಿಕೊಂಡು ಅಪನಂಬಿಕೆ ಅಥವಾ Mistrust ಅನ್ನು ವ್ಯಕ್ತಿತ್ವದ ಮೂಲ ಸ್ವರೂಪವನ್ನಾಗಿ ರೂಪಿಸಿಕೊಳ್ಳುತ್ತಾರೆ.

ನಮ್ಮ ಶಿಕ್ಷಣ ಈ ಜಗತ್ತಿನ ಸಮಸ್ತವನ್ನೂ ಒಂದು ಸವಾಲು ಎಂದು ಪರಿಗಣಿಸುತ್ತ ಜೀವನ ಸೌಂದರ್ಯವನ್ನು, ಜೀವನಪ್ರೀತಿಯನ್ನು ಕಡೆಗಣಿಸುವ ಶಿಕ್ಷಣವನ್ನು ನೀಡಿದರೆ ಇಂತಹ ಸುಶಿಕ್ಷಿತ ಜನಸಮೂಹದಿಂದ ರೂಪುಗೊಳ್ಳುವ ಪ್ರಪಂಚ ದುಗುಡವನ್ನು, ಆತಂಕವನ್ನು ಮಾತ್ರ ಕಾಣಲು ಸಿದ್ಧವಾಗುತ್ತದೆ. ಈ ಹಿನ್ನಲೆಯಲ್ಲಿ ನಾವು ಗುಣಾತ್ಮಕ ಶಿಕ್ಷಣವನ್ನು ಒಂದು ಸವಾಲಿಗೆ ಮಗುವನ್ನು ತಯಾರು ಮಾಡುವುದು ಎಂಬ ಸೀಮಿತ ಅರ್ಥದಿಂದ ಬಿಡುಗಡೆ ಮಾಡಬೇಕಾಗಿದೆ. ಬದುಕಿನಲ್ಲಿ ಏರಿಳಿತಗಳು, ವಿಷಮ ಸನ್ನಿವೇಶಗಳು ಇಲ್ಲವೇ ಇಲ್ಲ ಎಂದಲ್ಲ. ಆದರೆ ಈ ಸವಾಲುಗಳನ್ನು ಯಾವ ಮನೋಧರ್ಮದಿಂದ ಎದುರಿಸಬೇಕು ಎಂಬುದು ಮುಖ್ಯ. ಸಮಸ್ಯೆಯನ್ನರಿಯುತ್ತ ಸಮಸ್ಯೆಯ ಭಾಗವಾಗಿ ಬೆಳೆದರೆ ಸಮಸ್ಯೆಗೆ ಪರಿಹಾರವೆಲ್ಲಿ? ಆದ್ದರಿಂದ ಮಗುವಿನ ಮನಸ್ಸಿನಲ್ಲಿ ಈ ಪ್ರಪಂಚದ ಬಗ್ಗೆ ಆದಷ್ಟು ಮಂಗಳ ದೃಷ್ಟಿಯನ್ನು ಬಿತ್ತುವುದು ಮುಖ್ಯ. ಈ ಜಗತ್ತು ಸದಾ ಕಾದಾಟ ನಡೆಯುತ್ತಿರುವ ಅಪಾಯಗಳ ಆಗರ ಎಂಬ ಭಾವನೆಗಿಂತ ಮಗು ತನ್ನದೇ ವ್ಯಕ್ತಿತ್ವದ ಖಚಿತ ರೂಪುರೇಖೆಗಳ ಆಧಾರದ ಮೇಲೆ ಈ ಸವಾಲುಗಳನ್ನು ಎದುರಿಸಲು ಶಿಕ್ಷಣ ನೆರವಾಗಬೇಕು. ಇದೊಂದು ಬಹಳ ಸೂಕ್ಷ್ಮವಾದ ವಿಷಯ. ಇಂತಹ ಸೂಕ್ಷ್ಮವಾದ ಮನೋಧರ್ಮವನ್ನು ಬಿತ್ತುವ ಅಧ್ಯಾಪಕನಿಗೆ ಅಷ್ಟೇ ಸೂಕ್ಷ್ಮವಾದ ಮನಸ್ಸಿರಬೇಕು, ಸಂಯಮ ಇರಬೇಕು; ಎಲ್ಲಕ್ಕಿಂತ ಹೆಚ್ಚಾಗಿ ಅವನಿಗೆ ಮಂಗಳದೃಷ್ಟಿ ಇರಬೇಕು. ವ್ಯಕ್ತಿತ್ವನಿರ್ಮಾಣ ಎಂದರೆ ಇದೇ ಹೊರಗಿನ ಏರಿಳಿತಗಳು ಹೆಚ್ಚಾದಷ್ಟೂ ಆರೋಗ್ಯಕರ ಮನಸ್ಸಿನ ಸ್ಥಿರತೆ ಪುಟವಿಕ್ಕಿದ ಚಿನ್ನದಂತೆ ಮತ್ತಷ್ಟು ಸ್ಥಿರವಾಗುತ್ತ ಹೋಗುತ್ತದೆ. ಇದನ್ನು ಬೌದ್ಧಿಕ ಚಿಂತನೆಗಳಿಂದ ಮಾತ್ರ ಗಳಿಸಲಾಗುವುದಿಲ್ಲ. " ನೂರಾರು ನದಿಗಳು ಬಂದು ಸಮುದ್ರವನ್ನು ಸೇರಿದರೂ ಸಮುದ್ರ ಹೇಗೆ ಅಚಲವೊ ಹಾಗೆಯೆ ಸ್ಥಿತಪ್ರಜ್ಞನ ಮನಸ್ಸು" ಎಂದು ಗೀತೆಯಲ್ಲಿ ಹೇಳಿದೆ. ಇಂತಹ ಸ್ಥಿತಿ ಮನಸ್ಸಿಗೆ ಬರಬೇಕಾದರೆ ಧನಾತ್ಮಕ ಚಿಂತನೆ, ಮಂಗಳದೃಷ್ಟಿ, ಸಕಲ ಜೀವರಿಗೂ ಲೇಸನ್ನೆ ಬಯಸುವ ಮನಸ್ಸು – ಮುಖ್ಯವಾಗಿ ಸತ್ಯ–ಅಹಿಂಸೆಗಳ ಮೌಲ್ಯಗಳು ಬೇಕು. ಹಿಂದಿನ ಗುರುಕುಲ ಪದ್ಧತಿಯಲ್ಲಿ ಈ ಮನಸ್ಥಿತಿಗೆ ಬೇಕಾದ ತರಬೇತಿ ಶಿಕ್ಷಣದ ಬಹುಮುಖ್ಯ ಅಂಗವಾಗಿತ್ತು.

ಇಂದು ಎಲ್ಲಕ್ಕೂ 'ಇನ್‌ಸ್ಟೆಂಟ್ ರೆಮಿಡಿ' ಅಥವಾ ಆ ಕ್ಷಣದ ಪರಿಹಾರಗಳನ್ನು ಕಂಡುಕೊಳ್ಳುವ ಮನೋಧರ್ಮ ಬೆಳೆಯುತ್ತಿದೆ. ಮನುಷ್ಯನ ನಡವಳಿಕೆಗೆ ಸಂಬಂಧಪಟ್ಟಂತೆ

ಹೇಳುವುದಾದರೆ ಇಂದಿನ ಅವನ ಮನಃಸ್ಥಿತಿ ಅಥವಾ ಅವನ ನಡವಳಿಕೆ ಕೇವಲ ವರ್ತಮಾನದ ಘಟನೆಯಲ್ಲ. ವ್ಯಕ್ತಿಯ ವರ್ತಮಾನದ ಘಟನೆಗೆ ಆ ವ್ಯಕ್ತಿ ಬಹಳ ಹಿಂದಿನಿಂದಲೂ ನಡೆದುಕೊಂಡು ಬಂದ ರೀತಿನೀತಿಗಳು ಕಾರಣವಾಗಿರುತ್ತವೆ. ಅವನ ನಡವಳಿಕೆ ಶೇಖರಿಸಿಕೊಂಡು ಬಂದ ಒಂದಕ್ಕೊಂದು ಸಂಬಂಧವಿರುವ ಘಟನಾವಳಿಯ ಸರಣಿಗೆ ಅನುಗುಣವಾಗಿರುತ್ತದೆ. ಹಾಗಾಗಿ ಇಂದಿನ ವಿಕೃತ ನಡವಳಿಕೆಯನ್ನು ಆ ನಡವಳಿಕೆಗಷ್ಟೇ ಔಷಧ ಕೊಡುವ ಮೂಲಕ ಪರಿಹರಿಸಲು ಸಾಧ್ಯವಿಲ್ಲ. ಅಥವಾ ಕಾಲಪಥದಲ್ಲಿ ಹಿಮ್ಮುಖವಾಗಿ ಹೋಗಿ ಆ ವ್ಯಕ್ತಿ ತಿಳುವಳಿಕೆ ಇಲ್ಲದೆ ರೂಢಿಸಿಕೊಂಡ ಮೂಲ ವಿಕೃತ ಭಾವನೆಯನ್ನು ಸರಿ ಮಾಡಬಹುದಾದ ಸಂದರ್ಭವನ್ನು ಸೃಷ್ಟಿಸಲು ಸಾಧ್ಯವಿಲ್ಲ. ಆದರೆ ಈ ಇನ್ಸ್‌ಟೆಂಟ್ ಯುಗದಲ್ಲಿ ಪರಿಹಾರಗಳೆಲ್ಲ ವರ್ತಮಾನದಲ್ಲಿ ಈಗ ಈ ಕ್ಷಣ ಲಭ್ಯವಾಗಿಬಿಡಬೇಕು. ಆದರೆ ಇದು ಅವಾಸ್ತವ ಎಂಬ ತಿಳುವಳಿಕೆ ನಮಗೆ ಬರಬೇಕು. 'ಧರ್ಮಗುರುಗಳು' ಅಥವಾ ಆಧುನಿಕ ಸಲಹೆಗಾರರು ಅಥವಾ ಸೈಕಾಲಜಿಸ್ಟ್‌ಗಳು 'ಇನ್ಸ್‌ಟೆಂಟ್ ರೆಮಿಡಿ'ಗಳನ್ನು ಕೊಡುತ್ತ ಹಣ ಮಾಡುತ್ತಾರಷ್ಟೆ. ಈ ಪರಿಹಾರ ಒಂದು ಮರೀಚಿಕೆ. ಇದು ಎಂದೂ ಸಮಸ್ಯೆಯನ್ನು ಬಗೆಹರಿಸಲಾರದು. ಭೂತಕಾಲದಲ್ಲಿ ತನ್ನ ಬೇರುಗಳನ್ನು ಬಿಟ್ಟಿರುವ ಸಮಸ್ಯೆಯನ್ನು ಮನುಷ್ಯ ವರ್ತಮಾನದಲ್ಲಿ ಶುಲ್ಕ ಕೊಟ್ಟು ಪರಿಹರಿಸಿಕೊಳ್ಳಲು ಸಾಧ್ಯವಿಲ್ಲ. ಆದ್ದರಿಂದ ಸಮಸ್ಯೆ ಹುಟ್ಟುವ ಮೊದಲಿಗೆ ಅಂತಹ ಒಂದು ಸಮಸ್ಯೆಯನ್ನು ಊಹಿಸಿ ಅಗತ್ಯವಾದ ನಡವಳಿಕೆಯ ಸೂತ್ರಗಳನ್ನು ರೂಪಿಸಿಕೊಂಡು ಪರಿಹಾರೋಪಾಯಗಳನ್ನು ಕಂಡುಕೊಳ್ಳಬೇಕು. ವಿವೇಕ ಎಂದರೆ ಇದೇ. ಮುಂದೆ ಆಗುವ ಅವಘಡಗಳನ್ನು ಮೊದಲಿಗೇ ಊಹಿಸಿ ಸನ್ನದ್ಧರಾಗುವುದು. ಇಂತಹ ವಿವೇಕ ನಮ್ಮ ಗುರುಕುಲ ಪದ್ಧತಿಯಲ್ಲಿ ಖಂಡಿತವಾಗಿಯೂ ಇತ್ತು. ಗುರುಗಳು ಮನಸ್ಸನ್ನು ಕೇವಲ ಬೌದ್ಧಿಕವಾಗಿ ತಯಾರು ಮಾಡುತ್ತಿರಲಿಲ್ಲ. ಅವರು ಅನೇಕ ಬಗೆಯ ಕಠಿಣ ಕ್ರಮಗಳನ್ನು, ಅದರ ಜೊತೆಗೆ ಪ್ರೀತಿಯನ್ನು ಬೆರೆಸಿ ಶಿಷ್ಯರಿಗೆ ಧಾರೆಯೆರೆಯುತ್ತಿದ್ದರು.

ಆಧುನಿಕರಾಗುವ ಭ್ರಮೆಯಲ್ಲಿ ನಾವು ನಮ್ಮ ಗುರುಕುಲ ಪರಂಪರೆಯಲ್ಲಿ ಹುದುಗಿರುವ ವಿವೇಕವನ್ನು ಕಳೆದುಕೊಳ್ಳುತ್ತಿದ್ದೇವೆ. ಸಂಯಮ ಮತ್ತು ಕಾಮ-ಕಾಂಚನಾಸಕ್ತಿಯನ್ನು ಹತೋಟಿಯಲ್ಲಿಡುವುದೇ ಈ ವಿವೇಕದ ಪ್ರಥಮ ಸೋಪಾನ. ಈ ಪದ್ಧತಿ ರೂಪಿಸುವ ಮನಸ್ಸಿನ ತರಬೇತಿ ನಮ್ಮ ತರ್ಕಾಧಾರಿತ ವೈಚಾರಿಕತೆಗೆ ಸಮಂಜಸವಾಗಿ ಕಾಣದಿರಬಹುದು. ಏಕೆಂದರೆ ನಮ್ಮ ತರ್ಕ ವರ್ತಮಾನದ ವಿದ್ಯಮಾನವನ್ನು ಮಾತ್ರ ಗಣನೆಗೆ ತೆಗೆದುಕೊಂಡು ತೀರ್ಪು ನೀಡುತ್ತದೆ. ಆದರೆ ವರ್ತಮಾನದಲ್ಲಿ ಸಮಸ್ಯೆ ಇಲ್ಲದಿದ್ದರೂ ಮುಂದೆ ಹುಟ್ಟಬಹುದಾದ ಸಮಸ್ಯೆಯನ್ನು ಊಹಿಸಿ ಅದಕ್ಕೆ ಮುಂಜಾಗ್ರತೆಯ ಕ್ರಮವಾಗಿ ಕೆಲವು ಆಚರಣೆಗಳನ್ನು ಈ ಗುರುಕುಲ ಪದ್ಧತಿಯ ವಿವೇಕ ನಿಗದಿಪಡಿಸುತ್ತದೆ. ವರ್ತಮಾನದಲ್ಲಿ ಇಲ್ಲದ ಸಮಸ್ಯೆಗೆ ತಲೆಕೆಡಿಸಿಕೊಳ್ಳದಿರುವುದೇ ಬುದ್ಧಿವಂತಿಕೆ ಎಂದು ಭಾವಿಸಿರುವ ಜನಸಮುದಾಯದ ಮನಃಸ್ಥಿತಿ ಇವನ್ನೆಲ್ಲ ಅರ್ಥಹೀನ ಆಚರಣೆಗಳು

ಎಂದು ಪರಿಗಣಿಸಿ ಪಕ್ಕಕ್ಕೆ ತಳ್ಳಿಬಿಡುತ್ತದೆ. ತಂತ್ರಜ್ಞಾನದ ಸಾಧ್ಯತೆ ಆಯಾ ಕ್ಷಣದಲ್ಲೇ ಪರಿಹಾರವನ್ನು ಕಂಡುಕೊಳ್ಳುವ ವಿಧಾನವನ್ನು ತೋರಿಸುತ್ತಿರುವುದರಿಂದ ಎಲ್ಲಕ್ಕೂ ಆ ಕ್ಷಣದ ಪರಿಹಾರವೆ ಮದ್ದು ಎಂದು ನಮ್ಮ ಆಧುನಿಕ ಗುರುಗಳು ಬೋಧಿಸುತ್ತಿದ್ದಾರೆ. ಈ ಕಾರಣಗಳಿಂದಾಗಿ ಶಿಕ್ಷಣ ಬದುಕಿನ ಸಮಸ್ಯೆಯನ್ನು ಗುರುತಿಸಿ ಪರಿಹಾರ ನೀಡುವ ಬದಲು ಸಮಸ್ಯೆಯ ಭಾಗವಾಗಿ ಬೆಳೆಯುತ್ತ ಹೋಗುತ್ತಿದೆ. ಇದೊಂದು ನವಯುಗದ ಘೋರ ದುರಂತ. ಘೋರ ರೋಗಗಳಿಗೆ ಮುನ್ನೆಚ್ಚರಿಕೆ ಕ್ರಮವಾಗಿ ರೋಗನಿರೋಧಕಗಳನ್ನು ತೆಗೆದುಕೊಳ್ಳುವ ನಾವು ಮಾನಸಿಕ ರೋಗಗಳಿಗೆ ಪೂರ್ವಭಾವಿಯಾಗಿ ಲಸಿಕೆ ತೆಗೆದುಕೊಳ್ಳಲು ನಿರಾಕರಿಸುತ್ತಿರುವುದು ವಿಪರ್ಯಾಸವೇ ಸರಿ. ಸಿಡುಬು, ಪೋಲಿಯೊ ರೋಗಗಳ ಪರಿಣಾಮ ಕಣ್ಣೆದುರಿಗೆ ಕಾಣುತ್ತದೆ. ಆದರೆ ಪೂರ್ವ ಸಿದ್ಧತೆಯ ಮೂಲಕ ವ್ಯಕ್ತಿತ್ವದ ವಿಕೃತಿಗಳು ಎಂದರೆ ಮನೋರೋಗಗಳು ಉಲ್ಬಣಗೊಳ್ಳದಂತೆ ಪರಿಹಾರೋಪಾಯಗಳನ್ನು ಕಂಡುಕೊಳ್ಳದೆ ಇರುವುದು ಸಿಡುಬು, ಪೋಲಿಯೊಗಳಿಗಿಂತ ಘೋರ ಪರಿಣಾಮವನ್ನುಂಟು ಮಾಡುವುದರಲ್ಲಿ ಸಂದೇಹವಿಲ್ಲ.